# ಕೇರಳ ಪಾಠಾವಳಿ
# KERALA READER

## ಕನ್ನಡ
## KANNADA

# ಮುಂದುವರಿದ ಪಠ್ಯ
# ADVANCED TEXT

ತರಗತಿ

VI

ಭಾಗ - 2

ಕೇರಳ ಸರಕಾರ
ಸಾರ್ವಜನಿಕ ಶಿಕ್ಷಣ ಇಲಾಖೆ

ತಯಾರಕರು
ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ ಪೂಜಪುರ, ತಿರುವನಂತಪುರ - 695 012

2025

## ರಾಷ್ಟ್ರಗೀತೆ

ಜನಗಣ ಮನ ಅಧಿನಾಯಕ ಜಯಹೇ
ಭಾರತ ಭಾಗ್ಯ ವಿಧಾತಾ
ಪಂಜಾಬ ಸಿಂಧು ಗುಜರಾತ ಮರಾಠ
ದ್ರಾವಿಡ ಉತ್ಕಲ ವಂಗ
ವಿಂಧ್ಯ ಹಿಮಾಚಲ ಯಮುನಾ ಗಂಗಾ
ಉಚ್ಛಲ ಜಲಧಿತರಂಗ
ತವಶುಭ ನಾಮೇ ಜಾಗೇ
ತವಶುಭ ಆಶಿಷ ಮಾಗೇ
ಗಾಹೇ ತವಜಯ ಗಾಥಾ
ಜನಗಣ ಮಂಗಲದಾಯಕ ಜಯಹೇ
ಭಾರತ ಭಾಗ್ಯವಿಧಾತಾ
ಜಯಹೇ ಜಯಹೇ ಜಯಹೇ
ಜಯ ಜಯ ಜಯ ಜಯಹೇ

## ಪ್ರತಿಜ್ಞೆ

ಭಾರತವು ನನ್ನ ದೇಶ. ಭಾರತೀಯರೆಲ್ಲರೂ ನನ್ನ ಸಹೋದರ, ಸಹೋದರಿಯರು.

ನಾನು ನನ್ನ ದೇಶವನ್ನು ಪ್ರೀತಿಸುತ್ತೇನೆ. ಅದರ ಸಂಪನ್ನ ಹಾಗೂ ವೈವಿಧ್ಯಪೂರ್ಣವಾದ ಪರಂಪರೆಗೆ ನಾನು ಹೆಮ್ಮೆಪಡುತ್ತೇನೆ.

ನಾನು ನನ್ನ ತಂದೆ, ತಾಯಿ ಮತ್ತು ಗುರುಹಿರಿಯರನ್ನು ಗೌರವಿಸುತ್ತೇನೆ. ಮತ್ತು ಎಲ್ಲರೊಡನೆ ಸೌಜನ್ಯದಿಂದ ವರ್ತಿಸುತ್ತೇನೆ.

ನಾನು ನನ್ನ ದೇಶ ಮತ್ತು ದೇಶದ ಜನರಿಗೆ ನನ್ನ ಶ್ರದ್ಧೆಯನ್ನು ಮುಡಿಪಾಗಿಡುತ್ತೇನೆ. ಅವರ ಕ್ಷೇಮ ಮತ್ತು ಸಮೃದ್ಧಿಯಲ್ಲೇ ನನ್ನ ಆನಂದವಿದೆ.

Kannada - VI (Advanced Text)

---

Prepared by :
**State Council of Educational Research and Training (SCERT)**
Poojapura, Thiruvananthapuram - 695012 Kerala
website : scertkerala.gov.in. Email : scertkerala@gmail.com.
Phone : 0471-2341883. Fax : 0471-2341869
Typeset designed by : SCERT
First Edition : 2025
Printed at : KBPS Kakkanad, Kochi
© Department of General Education, Govt. of Kerala.

# ಮುನ್ನುಡಿ

ಪ್ರೀತಿಯ ವಿದ್ಯಾರ್ಥಿಗಳೇ,

ಭಾಷೆ ಕೇವಲ ಸಂವಹನದ ಮಾಧ್ಯಮವಲ್ಲ. ಅದು ನಮ್ಮ ಕಣ್ಣಿಗೆ ಸರಿಸಮವಾಗಿದೆ. ನಾವು ದಿನನಿತ್ಯ ಕಲಿಯುವ ಭಾಷೆಯಲ್ಲಿ, ಅದರಲ್ಲೂ ಮಾತೃಭಾಷೆಯಲ್ಲಿ ಮಾತನಾಡಲು, ಓದಲು ಮತ್ತು ಬರೆಯಲು ಕೇವಲ ಮೂಲಭೂತ ಭಾಷಾ ಕೌಶಲ್ಯಗಳಿದ್ದರೆ ಮಾತ್ರ ಸಾಕಾಗುವುದಿಲ್ಲ.

ಭಾಷೆಯ ಪ್ರಮುಖ ಶಕ್ತಿಯೆಂದರೆ ಅದು ನಮ್ಮನ್ನು ಕಲ್ಪನೆಯ ಕ್ಷೇತ್ರದಿಂದ ಆಚೆಗೆ ಕೊಂಡೊಯ್ಯಬಲ್ಲುದು. ಸೃಜನಶೀಲ ವಿದ್ಯಾರ್ಥಿಗಳಿಗೆ ಭಾಷಾ ಶಿಕ್ಷಣ ಪ್ರೇರಕ ಶಕ್ತಿಯಾಗುತ್ತದೆ. ಕೆಲವರ ಭಾಷಾ ಶೈಲಿಯೇ ಅವರನ್ನು ಪ್ರತ್ಯೇಕವಾಗಿ ಗುರುತಿಸುವಂತೆ ಮಾಡುತ್ತದೆ. ನಾವೂ ನಮ್ಮದೇ ಆದ ಭಾಷೆಯನ್ನು ಬೆಳೆಸಿಕೊಳ್ಳುವುದನ್ನು ಕಲಿಯಬೇಕು.

ಪಠ್ಯಪುಸ್ತಕವು ಮುದ್ರಿತ ಪತ್ರಿಕೆಗಳ ಸಂಗ್ರಹವಲ್ಲ; ಅದರಲ್ಲಿ ಉತ್ತಮ ಶಿಕ್ಷಕರು, ವಿಜ್ಞಾನಿಗಳು ಮತ್ತು ತತ್ವಜ್ಞಾನಿಗಳು ಅಡಗಿರುತ್ತಾರೆ. ಪಠ್ಯಪುಸ್ತಕಗಳು ನಮ್ಮ ಬದುಕಿಗೆ ಮಾರ್ಗದರ್ಶಕವಾಗಿರುತ್ತವೆ, ಒಬ್ಬರಿಗೊಬ್ಬರು ಬೆರೆಯುವ ಗೆಳೆಯರಂತೆ ಇರುತ್ತವೆ, ಹಿತೈಷಿಗಳಂತೆ ಇರುತ್ತವೆ ಎನ್ನಬಹುದು. ಪಠ್ಯಪುಸ್ತಕವು ನಮಗೆ ಉಪಯುಕ್ತವಾಗಬೇಕು, ನಾವು ಸೇರಿರುವ ಸಮಾಜದ ಸುಖ-ದುಃಖಗಳಲ್ಲಿ ಭಾಗವಹಿಸುವಂತೆ ಮಾಡಬೇಕು ಮತ್ತು ನಾವು ವಾಸಿಸುವ ದೇಶದ ಅಭಿವೃದ್ಧಿಯಲ್ಲಿ ಭಾಗವಹಿಸಲು ಪ್ರೋತ್ಸಾಹಿಸಬೇಕು. ಎಲ್ಲಕ್ಕಿಂತ ಹೆಚ್ಚಾಗಿ ಉತ್ತಮ ಶಿಕ್ಷಕರ ಸಹಾಯದಿಂದ ನಮ್ಮ ಜ್ಞಾನವನ್ನು ಬೆಳೆಸಿಕೊಳ್ಳಲು ಅವು ಸಹಾಯ ಮಾಡಬೇಕು. ಸುದೃಢ, ಸ್ವಸ್ಥ ಸಮಾಜ ನಿರ್ಮಾಣಕ್ಕೆ ಪಠ್ಯಪುಸ್ತಕವು ಸಹಕಾರಿಯಾಗಬೇಕು. ಇವೆಲ್ಲವನ್ನೂ ಗಮನದಲ್ಲಿಟ್ಟುಕೊಂಡು ಈ ಪಠ್ಯಪುಸ್ತಕವನ್ನು ರೂಪಿಸಲಾಗಿದೆ.

ಭಾಷಾ ಪಠ್ಯಪುಸ್ತಕವು ನಿಮ್ಮ ಚಿಂತನೆಯನ್ನು ಶ್ರೀಮಂತಗೊಳಿಸಲಿ.

ಅಭಿನಂದನೆಗಳು,

**ಡಾ. ಜಯಪ್ರಕಾಶ್ ಆರ್.ಕೆ.**
ನಿರ್ದೇಶಕರು,
ಎಸ್.ಸಿ.ಇ.ಆರ್.ಟಿ., ಕೇರಳ

ತಿರುವನಂತಪುರ

# TEXT BOOK DEVELOPMENT COMMITTEE
# KANNADA VI - PART 2

**Advisor**

| | |
|---|---|
| Shivashankara P. | Asst. Professor, GPM College, Manjeshwara. |

**Chairperson**

| | |
|---|---|
| Dr. Balakrishna B.M. | Associate Professor, Govt. College, Kasaragod |

**Experts**

| | |
|---|---|
| C.H. Rama Bhat | Professor of Kannada (Rtd), Govt. College, Kasaragod |
| Dr. Savitha B. | Associate Professor, Govt. College, Kasaragod |
| Ramanna D. | Rtd. HM, GVHSS Delampady |

**Participants**

| | |
|---|---|
| Shridhara Bhat B. | HM, GBLPS Heroor |
| Radhakrishna Bhat K. | UPST, SNHS Perla |
| Shrinivasa K.H. | UPST, AUPS Dharmathadka |
| Gopala P.K . | UPST, GHSS Padre |
| Jyothsna K. | UPST, NHSS Perdala |
| Praveen K. | UPST, GHSS Paivalike Nagar |
| Nayana Prasad H.T. | UPST, GHS Kadambar |
| Pradeep Kumar B.S. | UPST, BAUPS Katukukke |

**Artists**

| | |
|---|---|
| Divakara | Drawing Teacher (Rtd), GHSS Kumbale |
| Satheesh K. | Drawing Teacher, BRC Kumbale |

**Academic Co-ordinator**
**Dr. Sahaya Dhas D.**
Research Officer, SCERT, Thiruvananthapuram.

ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಸಮಿತಿ (SCERT)
ವಿದ್ಯಾಭವನ, ಪೂಜಪುರ, ತಿರುವನಂತಪುರ - 695 012

# ಅನುಕ್ರಮಣಿಕೆ


| ಕ್ರಮಸಂಖ್ಯೆ | ಘಟಕ | ಪುಟ ಸಂಖ್ಯೆ |
|---|---|---|
| 4. | ತಾಣ ಪಯಣ | 7 - 30 |
| | 1. ಕೊಡಚಾದ್ರಿಯಲ್ಲಿ ಒಂದಿರುಳು ಹಾದಿ ತಪ್ಪಿ (ಪ್ರವಾಸಕಥನ) | |
| | 2. ಲಾಲ್ ಭಾಗ್ (ಕವನ) | |
| | 3. ಪಶ್ಚಿಮ ಘಟ್ಟಗಳ ಪತನ (ಲೇಖನ) | |
| 5. | ಉದ್ಯೋಗ ಜಗತ್ತು | 31 - 52 |
| | 1. ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ (ಕೀರ್ತನೆ) | |
| | 2. ಮಗ್ಗದ ಸಾಹೇಬ (ಕಥೆ) | |
| | 3. ರೋಬಾಟ್ ಜಗತ್ತಿನಲ್ಲಿ ಒಂದು ಸುತ್ತು (ಲೇಖನ) | |

# ಭಾರತದ ಸಂವಿಧಾನ

## ಪ್ರಸ್ತಾವನೆ

ಭಾರತದ ಜನಗಳಾದ ನಾವು ಭಾರತವನ್ನು ಒಂದು [1]**[ಸಾರ್ವಭೌಮ ಸಮಾಜವಾದೀ ಸರ್ವಧರ್ಮ ಸಮಭಾವದ ಪ್ರಜಾಸತ್ತಾತ್ಮಕ ಗಣರಾಜ್ಯವಾಗಿ]** ರಚಿಸಲು ಮತ್ತು ಅದರ ಸಮಸ್ತ ನಾಗರಿಕರಿಗೆ:

ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ **ನ್ಯಾಯ** ;
ವಿಚಾರ, ಅಭಿವ್ಯಕ್ತಿ, ವಿಶ್ವಾಸ, ಧರ್ಮಶ್ರದ್ಧೆ ಮತ್ತು ಉಪಾಸನಾ **ಸ್ವಾತಂತ್ರ್ಯ** ;
ಸ್ಥಾನಮಾನ ಹಾಗೂ ಅವಕಾಶ **ಸಮಾನತೆ**

ದೊರೆಯುವಂತೆ ಮಾಡಲು ಮತ್ತು ವ್ಯಕ್ತಿ ಗೌರವವನ್ನು,[2][ರಾಷ್ಟ್ರದ ಏಕತೆಯನ್ನು ಹಾಗೂ ಅಖಂಡತೆಯನ್ನು] ಸುನಿಶ್ಚಿತಗೊಳಿಸಿ ಅವರಲ್ಲಿ **ಭ್ರಾತೃಭಾವನೆಯನ್ನು** ವೃದ್ಧಿಗೊಳಿಸಲು ಶ್ರದ್ಧಾಪೂರ್ವಕ ಸಂಕಲ್ಪ ಮಾಡಿದವರಾಗಿ;

**ನಮ್ಮ ಸಂವಿಧಾನ ಸಭೆಯಲ್ಲಿ** 1949ನೆಯ ಇಸವಿ ನವೆಂಬರ್ ತಿಂಗಳ ಇಪ್ಪತ್ತಾರನೆಯ ತಾರೀಖಾದ ಈ ದಿವಸ **ಈ ಮೂಲಕ ಈ ಸಂವಿಧಾನವನ್ನು ಅಂಗೀಕರಿಸಿ, ಅಧಿನಿಯಮಿಸಿ ಅರ್ಪಿಸಿಕೊಂಡಿದ್ದೇವೆ.**

---

1. 1976ನೇ ಇಸವಿಯ ಭಾರತ ಸಂವಿಧಾನ (ನಲವತ್ತೆರಡನೆಯ ತಿದ್ದುಪಡಿ) ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ಸಂಪೂರ್ಣ ಪ್ರಭುತ್ವ ಸಂಪನ್ನ ಲೋಕತಂತ್ರಾತ್ಮಕ ಗಣರಾಜ್ಯವಾಗಿ" ಎಂಬ ಪದಗಳ ಬದಲಾಗಿ (3-1-1977 ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.
2. ಮೇಲ್ಕಂಡ ಅಧಿನಿಯಮದ 2ನೇ ಪ್ರಕರಣದ ಮೇರೆಗೆ "ರಾಷ್ಟ್ರದ ಏಕತೆಯನ್ನೂ" ಎಂಬ ಪದಗಳ ಬದಲಾಗಿ (3 - 1 - 1977ರಿಂದ ಜಾರಿಗೆ ಬರುವಂತೆ) ಪ್ರತ್ಯಾಯೋಜಿಸಲಾಗಿದೆ.

# 4. ತಾಣ - ಪಯಣ

ಆಧುನಿಕ ಸಾಹಿತ್ಯ ಪ್ರಕಾರಗಳಲ್ಲಿ ಪ್ರವಾಸ ಕಥನವೂ ಒಂದು. 'ದೇಶ ಸುತ್ತು - ಕೋಶ ಓದು' ಎಂಬ ಮಾತಿದೆ. ಪ್ರವಾಸದ ಸಮಯದಲ್ಲಿ ಕೇಳಿದ, ನೋಡಿದ, ಅನುಭವಿಸಿದ ಅಂಶಗಳನ್ನು ಸುಂದರವಾಗಿ ದಾಖಲಿಸುವುದೊಂದು ಕಲೆ. ಪ್ರವಾಸವು ಅನುಭವವನ್ನು ಹೆಚ್ಚಿಸುತ್ತದೆ. ವೈವಿಧ್ಯಮಯ ಜೀವನ ದರ್ಶನವನ್ನು ಮಾಡಿಸುತ್ತದೆ. ಪ್ರಕೃತಿ ರಮಣೀಯ ಸ್ಥಳಗಳು ಪ್ರಕೃತಿಯ ಅದ್ಭುತಗಳು ಮನಸ್ಸಿಗೆ ಮುದ ನೀಡುತ್ತವೆ ಮತ್ತು ಜನ ಜೀವನವನ್ನು ಸುಂದರಗೊಳಿಸುತ್ತವೆ. ಅಂತೆಯೇ ಪ್ರವಾಸವು ಮೋಜಿನಾಟವಾಗಿ ಕೆಲವೊಮ್ಮೆ ಪರಿವರ್ತನೆ ಹೊಂದಿ ಅದು ಪ್ರಕೃತಿಯ ಶೋಷಣೆ ಮತ್ತು ಪ್ರವಾಸಿ ತಾಣಗಳ ವಿಕೃತಿಗಳಿಗೂ ಕಾರಣವಾಗುತ್ತದೆ. ಇವು ನಮ್ಮ ಸಂಸ್ಕೃತಿಯ ಅವನತಿಗೆ ಕಾರಣವಾಗಬಹುದು. ಪ್ರಕೃತಿಯನ್ನು ಯಾವ ರೀತಿಯಲ್ಲಿಯೂ ನಾಶಗೊಳಿಸದೆ ಉಳಿಸಿ ಬೆಳೆಸುವ ಮನೋಭಾವ ನಮ್ಮದಾಗಬೇಕು.







## ಪ್ರವೇಶ ಚಟುವಟಿಕೆ


ಜಿಲ್ಲೆಗೆ ಪ್ರವಾಸಿಗರ ಸಂಖ್ಯೆ ಹೆಚ್ಚಳ


ಕೇಂದ್ರೀಯ ವಿವಿ ವಿದ್ಯಾರ್ಥಿಗಳಿಂದ ಬೀಚ್ ಸ್ವಚ್ಛತೆ


ತಳಂಗರೆಗೆ ಪ್ರವಾಸಿಗರನ್ನು ಆಕರ್ಷಿಸಲು ಯೋಜನೆ

"ಏನೇ ಆದರೂ-ಓದುವುದಕ್ಕಿಂತ ಮತ್ತೊಂದು ಸಂತೋಷಕರವಾದುದು ಬೇರೇನೂ ಇಲ್ಲ ಎಂದು ನಾನು ಘೋಷಿಸುತ್ತೇನೆ" ಎಂಬ ಇಂಗ್ಲಿಷ್ ಪ್ರಮುಖ ಲೇಖಕಿಯರಲ್ಲೊಬ್ಬರಾದ ಜೇನ್ ಆಸ್ಟನ್‌ಳ ಚಿರಸ್ಮರಣೀಯವಾದ ಮಾತು.

ಹೌದು, ಓದು ಮತ್ತು ಸುತ್ತಾಟ ಹೊಸ ಹೊಸ ಲೋಕವನ್ನು ಪರಿಚಯಿಸುತ್ತವೆ.

ಲಂಡನ್ ಅದ್ಭುತ ನಗರ. ಅಲ್ಲಿನ ಐತಿಹಾಸಿಕ ಕಟ್ಟಡಗಳು, ಅರಮನೆಗಳು, ವಾಸ್ತುಶಿಲ್ಪ, ಬ್ರಿಟಿಷ್ ಮ್ಯೂಸಿಯಂ, ಬಹು ಆಕರ್ಷಕ ಲಂಡನ್ ಬ್ರಿಡ್ಜ್, ಕ್ವೀನ್ಸ್ ಕಲಾಗ್ಯಾಲರಿಗಳನ್ನು ನೋಡುವುದೇ ಸೊಗಸು. ಲೇಖಕರು ಕುತೂಹಲ ಮತ್ತು ಆಸಕ್ತಿಯಿಂದ ಅಲ್ಲೆಲ್ಲ ಸುತ್ತಾಡಿ, ಅನುಭವಿಸಿ ಬರೆದಿದ್ದಾರೆ.

- ಮೇಲಿನ ಕೊಲಾಷ್ ನಲ್ಲಿರುವ ವಿಚಾರಗಳನ್ನು ಓದಿ ಚರ್ಚಿಸಿರಿ. ನಿಮ್ಮ ನಿಗಮನಗಳನ್ನು ಬರೆದು ಮಂಡಿಸಿರಿ.

# ಕೊಡಚಾದ್ರಿಯಲ್ಲಿ ಒಂದಿರುಳು ಹಾದಿತಪ್ಪಿ

ಬೆಟ್ಟಗುಡ್ಡಗಳನ್ನು ಹತ್ತಲೆಳಸುವುದು ನನಗೆ ಚಿಕ್ಕಂದಿನಿಂದಲೂ ಇದ್ದಿರುವ ದುರಭ್ಯಾಸಗಳಲ್ಲಿ ಒಂದು. ಮನೆಯ ಅಂಗಳಕ್ಕೆ ಬಂದರೆ ತೆಂಕುದಿಕ್ಕಿಗೆ ಎದ್ದು ಕಾಣುತ್ತಿದ್ದ ಬಾಬಾಬುಡನ್ ಗಿರಿ ಬೆಟ್ಟಗಳೂ ಇದಕ್ಕೊಂದು ಕಾರಣವಿರಬಹುದು. ಬಾನೆತ್ತರಕೆ ಬೆಳೆದು ನಿಂತ ಈ ನೀಲಗಿರಿಗಳು, ಹಗಲು ಬೆಳಕಿನಲ್ಲಿ ನೆತ್ತಿಯಿಂದ ಸುರಿವ ಜಲಪಾತಗಳನ್ನು ತೋರುತ್ತ, ರಾತ್ರಿಯಾದೊಡನೆ ಕೆಮ್ಮಣ್ಣುಗುಂಡಿಯ ಲೈಟುಗಳನ್ನೇ ಕಣ್ಣುಮಾಡಿಕೊಂಡು ಮಿಣುಮಿಣುಕು ಮಾಡುತ್ತ, ಚಳಿಗಾಲದಲ್ಲಿ ಮೋಡಮಂಜುಗಳ ತಲೆಮುಸುಕನು ಎಳೆದುಕೊಂಡು, ಮಳೆಗಾಲದಲ್ಲಿ ನೀರಿನ ಬುರುಖಿ ಧರಿಸಿಕೊಂಡು ದಿಗಂತಗಳಲ್ಲಿ ಕರಗಿಹೋಗುತ್ತ, ಬಗೆಬಗೆಯಾಗಿ ಕಾಣುತ್ತಿದ್ದವು. ಬಯಲು ಸೀಮೆಗೆ ಬಾರದ ಮಳೆ ಈ ಗಿರಿಗಳಲ್ಲಿ ಸುರಿದು, ನಮ್ಮೂರ ಕೆರೆಗಳಿಗೆ ನೀರಾಗಿ ಹರಿದುಬರುತ್ತಿತ್ತು. ಈ ಕೆರೆಗಳಲ್ಲಿ ನಾವು ಈಜಾಡುತ್ತಿದ್ದೆವು. ಮೀನು ಹಿಡಿಯುತ್ತಿದ್ದೆವು. ಬಟ್ಟೆ ಒಗೆಯುತ್ತಿದ್ದೆವು. ಮೊದಮೊದಲು ಕುಡಿವ ನೀರನ್ನು ತುಂಬಿಕೊಂಡು ಬರುತ್ತಿದ್ದೆವು.

ವರ್ಷಕ್ಕೆ ಹಲವು ದಫ ಈ ಗಿರಿಗಳನ್ನು ಹತ್ತುವ ಅವಕಾಶ ನನಗೆ ಒದಗಿ ಬರುತ್ತಿತ್ತು. ಅದರಲ್ಲೂ ಬಾಬಾಬುಡನ್ ಗಿರಿಗೆ ಹೋಗುವುದೇ ಒಂದು ಸಂಭ್ರಮವಾಗಿತ್ತು. ಬೆಳ ಬೆಳಿಗ್ಗೆಯೇ ಚಿಕ್ಕಮಗಳೂರಿಗೆ ಸಂತವೇರಿ ಮೂಲಕ ಹೋಗುವ ಬಸ್ಸು ಹಿಡಿದು, ಎಮ್ಮೆಕಾನಲ್ಲಿ ಇಳಿದು, ಕಾಫಿ ಎಸ್ಟೇಟುಗಳನ್ನು ಹಾದು, ದಟ್ಟಾರಣ್ಯ ಹೊಕ್ಕು, ಹಲಸುಬಾಳಿನ ಮೂಲಕ ಜನ್ನತ್ಸಿಡಿ (ಸ್ವರ್ಗದ ಮೆಟ್ಟಿಲು) ಕಡೆಯಿಂದ ಕಡಿದಾದ ಬೆನ್ನನ್ನು ಹತ್ತಿ, ಸಂಜೆ ಹೊತ್ತಿಗೆ ಗಿರಿಗಿಳಿಯುತ್ತಿದ್ದೆವು. ಭಕ್ತಿಯ ಆವೇಶದಿಂದಲೂ ತಿರುಗುವ ಖುಶಿಯಿಂದಲೊ ಅಲ್ಲಿನ ಕಂದರಗಳಲ್ಲಿ ಅಲೆಯುತ್ತಿದ್ದೆವು. ನಾನು ಬಾಬಾಬುಡನ್ ಗಿರಿ ಬೆಟ್ಟಗಳಲ್ಲಿ ತಿರುಗಾಡಿ ಪಟ್ಟಷ್ಟು ಸಂತೋಷವನ್ನು ಇನ್ನೆಲ್ಲೂ ಪಟ್ಟಿಲ್ಲ. ಅದರ ಗದಗುಟ್ಟಿಸುವ ಚಳಿ, ಸಂಜೆ ಮುಂಜಾನೆ ಆವರಿಸುತ್ತಿದ್ದ ಬೆಳ್ಳನೆಯ ಹೊಗೆಮಂಜು, ಸುಂಯ್ಯೋ ಎಂದು ಬೀಸುವ ನೂಕುಗಾಳಿ, ಗುಹೆಯೊಳಗಿರುವ ತಣ್ಣನೆಯ ದರ್ಗಾ,

ಅದರೊಳಗೆ ಹಾಕುತ್ತಿದ್ದ ಲೋಬಾನದ ಹೊಗೆ ಕಂಪು, ರಾತ್ರಿಗೆ ನಗಾರಿ ಬಾರಿಸಿ ಕರೆದು 'ದಾದಾಪೀರ್ ಕ ಭಂಡಾರಾ' ಎಂದು ಕೊಡುತ್ತಿದ್ದ ಹಬೆಯಾಡುವ ಗಂಜಿ, ಕುಂಟೆಗಳನ್ನು ಕಚ್ಚಿ ಧಗಧಗಿಸುತ್ತಿದ್ದ ಬೆಂಕಿಯ ಹಿತವಾದ ಶಾಖ, ಕಲ್ಲಲ್ಲಿ ಹೊಡೆದಂತಾಗುವ ಅಲ್ಲಿನ ಜಲಪಾತಗಳಲ್ಲಿ ಮೀಯುವಿಕೆ, ಕುರಿಯನ್ನೊ ಕೋಳಿಯನ್ನೊ ಕೊಯ್ದು ಮಾಡುತ್ತಿದ್ದ ಅಡುಗೆ ಇವೆಲ್ಲ ನಮ್ಮ ಚೈತನ್ಯವನ್ನೇ ಅರಳಿಸುತ್ತಿದ್ದವು. ನಮ್ಮ ಭಾಗದ ಜನರಿಗೆ ಬಾಬಾಬುಡನ್ ಗಿರಿ ಬೆಟ್ಟಗಳು ಹುಟ್ಟಿನಿಂದ ಸಾವಿನ ತನಕ ಬದುಕನ್ನು ಆವರ್ತನವಾಗಿ ಆವರಿಸಿಕೊಂಡಿವೆ. ಅಪ್ಪ ಸಾಯುವ ಮುನ್ನ ಗಿರಿಗೆ ಹೋಗಬೇಕೆಂದು ಹಠಹಿಡಿದ; ತನಗೆ ಉಸಿರಾಟದ ತೊಂದರೆಯಿದ್ದರೂ ಗಿರಿಯನ್ನು ಹತ್ತಿಳಿದು ಬಂದ ಬಳಿಕವೇ ಜೀವಬಿಟ್ಟ.

ಸೂಫಿ ಮತ್ತು ನಾಥರ ಅಧ್ಯಯನಕ್ಕೆಂದು ಹೊರಟಾಗ, ಬೆಟ್ಟಗುಡ್ಡಗಳು ಅನಿವಾರ್ಯವಾಗಿ ಎದುರಾಗುತ್ತವೆ. ಮುಳ್ಳಯ್ಯನಗಿರಿ, ಚುಂಚನಗಿರಿ, ಹಂಡಿಬಡಗನಾಥ, ಮಾದೇಶ್ವರಬೆಟ್ಟದ ನಾಗಮಲೆ, ಅಂಬಿಕಾನಗರದ ಕವಳೆಬೆಟ್ಟ, ಶಿವಗಂಗೆಯ ಬೆಟ್ಟ, ಕೊರಟಗೆರೆಯ ಸಿದ್ಧರಬೆಟ್ಟ, ಶ್ರೀಶೈಲದ ಕದಳಿ, ಆಗುಂಬೆಯ ಕುಂದಾದ್ರಿ, ಆನೆಗೊಂದಿಯ ಆಂಜನೇಯ ಪರ್ವತ, ಗುಜರಾತಿನ ಪಾವಗಡ ಬೆಟ್ಟ, ತ್ರಯಂಬಕೇಶ್ವರದ ಕೌಳಪರ್ವತ, ರಾಜಸ್ಥಾನದ ಅಬೂಪರ್ವತ, ಪಳನಿಯ ಮುರುಗಾಮಲೈ, ವೈನಾಡಿನ ಚೆಂಬುರಾ,



ಹಿಮಾಲಯದ ಪರ್ವತಗಳು ಒಂದಕ್ಕಿಂತ ಒಂದು ಭಿನ್ನ ಅನುಭವ ಕೊಟ್ಟವು. ಆದರೆ ಕೊಡಚಾದ್ರಿಯು ಕೊಟ್ಟ ಅನುಭವದ ಪರಿಯೇ ಬೇರೆ.

ರಾತ್ರಿ ಹತ್ತು ಗಂಟೆಯ ಹೊತ್ತಿಗೆ ಕೊಡಚಾದ್ರಿ ಶಿಖರಕ್ಕೆ ದಂಡೀಯಾತ್ರೆ ಶುರುಮಾಡಿದೆವು. ಸೀಳುರಸ್ತೆ ಬಂದಕಡೆ ನಿಂತು ಪರಿಶೀಲಿಸಿ ಆದಷ್ಟೂ ಹೆಚ್ಚು ಸವೆದ ಹಾದಿ ಹಿಡಿಯುತ್ತಿದ್ದೆವು. ರಾತ್ರಿ 12 ಗಂಟೆ ಹೊತ್ತಿಗೆ ಮುಕ್ಕಾಲು ಭಾಗ ಹತ್ತಿರಬಹುದು. ಆಕಾಶದಲ್ಲೆಂಬಂತೆ ಕೊಡಚಾದ್ರಿಯ ಗುಡಿಯ ದೀಪಗಳು ಕಾಣಲಾರಂಭಿಸಿದವು.

ಕೊನೆಯ ಕಾಲು ಭಾಗ ತೀರ ಕಡಿದಾದ ಘಟ್ಟ, ಅರ್ಧಗಂಟೆಯಲ್ಲಿ ಕ್ರಮಿಸುವಂತಹುದು. ಅಷ್ಟರಲ್ಲಿ ಸಣ್ಣದೊಂದು ಬಯಲು ಬಂತು. ಅಲ್ಲಿ ದಾರಿ ಕವಲೊಡೆದಿತ್ತು. ಯಾರನ್ನು ಕೇಳುವುದು? ಹೇಗೆ ಹತ್ತಿದರೂ ಗುಡ್ಡದ ತುದಿ ಸಿಗಲೇಬೇಕು ಎಂಬ ಹುಂಬ ತರ್ಕದಲ್ಲಿ ಬಲಗಡೆಯ ಸೀಳನ್ನು ಹಿಡಿದು ಹೊರಟೆವು. ದೊಡ್ಡದೊಡ್ಡ ಮರದ ದಿಮ್ಮಿಗಳು ಅಡ್ಡ ಬಂದವು. ಅವುಗಳಡಿ ನುಸುಳಿ ಪಾರಾದೆವು. ಒಂದು ಗಂಟೆ ನಡೆದ ಮೇಲೆ ದಾರಿ ದಟ್ಟವಾದ ಹಳುವಿನಲ್ಲಿ ತಟ್ಟನೆ ಕೊನೆಗೊಂಡಿತು. ಇನ್ನೆಲ್ಲಿ ಹೋಗುವಿರಿ ಎಂಬಂತೆ ಗಿಡಮರಬಳ್ಳಿಗಳು ಕೈಕೈಹಿಡಿದು ಅಡ್ಡನಿಂತಿದ್ದವು. ಹತ್ತುವುದಿರಲಿ ತೆವಳಲೂ ಸಾಧ್ಯವಿಲ್ಲ. ವಾಸ್ತವವಾಗಿ ನಾವು ಬಂದದ್ದು ದಾರಿಯಾಗಿರದೆ ನೀರು ಹರಿದು ನಿರ್ಮಾಣವಾಗಿದ್ದ ಕೊರಕಲಾಗಿತ್ತು. ನಾವು ದಾರಿತಪ್ಪಿದ್ದೆವು. ಮೇಲಿಂದ ಬೀಳುತ್ತಿದ್ದ ನಕ್ಷತ್ರ ಬೆಳಕು ಸಹ ದಟ್ಟಕಾಡಿನ ನೆರಳಿನಲ್ಲಿ ಕಾಣದಂತಾಗಿ ಗವ್ವನೆ ಕತ್ತಲೆಯ ಬಸಿರೊಳಗೆ ನಿಂತಂತಾಯಿತು. ದಿಕ್ಕುತೋಚದೆ ಕಂಬಗಳಂತೆ ನಿಂತೆವು. ಕಾಡಿನ ಕೀಟಗಳ ಜೀರ್ಜೀರ್ ಶಬ್ದವೂ ಪಕ್ಕದ ಕಣಿವೆ ಸೀಳಿನಲ್ಲಿ ಹುಟ್ಟಿದ ಝರಿ, ದೂರದಲ್ಲಿ ಧುಮುಕುವ ಸದ್ದೂ ಬಿಟ್ಟರೆ ನೀರವ ಮೌನ. ಹತ್ತಿರದಲ್ಲೇ ಹಂದಿಯಿರಬೇಕು, ದಡದಡ ಸದ್ದು ಮಾಡುತ್ತ ಒಣಗಿದ ತರಗೆಲೆ ರಾಶಿಯೊಳಗಿಂದ ಓಡಿಹೋಯಿತು.

ನಮ್ಮ ಬ್ಯಾಟರಿಯ ಬೆಳಕು ಬರುಬರುತ್ತ ನಮ್ಮ ಮುಖಗಳಂತೆಯೇ ಮಂಕಾಗತೊಡಗಿತು. 'ಗಾಡ್ಯಾಗೆ ಆರಾಮಾಗಿ ಮಕ್ಕೊಳ್ತಿದ್ದೆ. ದೇವರ ಗುಡಿಯದೆಯಂತ ಬಂದೇರಿ' ಎಂದು ಡ್ರೈವರ್ ಮಂಜು ಚಡಪಡಿಸುತ್ತಿದ್ದ. ಬಯಲು ಸೀಮೆಯ ಅವನಿಗೆ ಈ ಮಲೆಕಾಡನ್ನು ನೋಡಿಯೇ ಅರ್ಧ ಉಸಿರು ಕಟ್ಟಿತ್ತು; ಇದಕ್ಕೆ ಕಳಸವಿಟ್ಟಂತೆ ದಾರಿತಪ್ಪಿದ್ದು

ಗೊತ್ತಾಗಿ 'ಈ ಹುಚ್ಚರ ಜತೆ ಬಂದೆನಲ್ಲ' ಎಂದು ಪರಿತಪಿಸುತಿದ್ದ.

ಈಗ ಉಳಿದಿದ್ದು ಎರಡೇ ದಾರಿ. ಮೊದಲನೆಯದು ಮರಳಿ ಹೋಗುವುದು. ಆದರೆ ಇಳಿದು ಹೋಗಲಾರದಷ್ಟು ಮೇಲೆ ಬಂದಿದ್ದೆವು. ಜತೆಗೆ ಬಂದ ದಾರಿಯೂ ಸ್ಪಷ್ಟವಾಗಿ ಕಾಣುತ್ತಿಲ್ಲ. ಎರಡನೆಯದಾಗಿ ಬೆಳಕು ಹರಿಯುವವರೆಗೂ ಅಲ್ಲೇ ನಿಲ್ಲುವುದು, ಮಲಗುವುದು ಇಲ್ಲವೆ ಯಾವುದಾದರೂ ಮರವೇರಿ ರಾತ್ರಿ ಕಳೆಯುವುದು. ಮಲಗುವುದಂತೂ ಅಸಾಧ್ಯವಾಗಿತ್ತು. ಎಷ್ಟೋ ಕಾಲದಿಂದ ಬಿದ್ದ ಎಲೆಗಳ ರಾಶಿಯೊಳಗೆ ಕಾಲು ಮೊಳಗಂಟಿನ ತನಕ ಹುದುಗಿದ್ದವು. ಇಲ್ಲಿನ ಎಲೆಗಳ ಮೇಲೆ ಅದೇ ಬಣ್ಣದ ಕನ್ನಡಿ ಹಾವುಗಳಿರುತ್ತವೆ. ನಾವಿದ್ದುದು ಕಾಡುಕೋಣ, ಹುಲಿ, ಕಾಳಿಂಗ ಸರ್ಪಗಳಿಗೆ ಹೆಸರಾದ ಮೂಕಾಂಬಿಕಾ ಅಭಯಾರಣ್ಯ.

ಒಬ್ಬೊಬ್ಬರು ಒಂದೊಂದು ಪರಿಯ ಸಲಹೆ ಕೊಡತೊಡಗಿದರು. ಎಲ್ಲವೂ ಅಸಹಾಯಕತೆಯಲ್ಲಿ ಹುಟ್ಟಿಬರುತ್ತಿದ್ದ ನಿಷ್ಪ್ರಯೋಜಕ ಗೊಣಗಾಟಗಳು. ಎಲ್ಲವನ್ನು ಕೇಳಿಸಿಕೊಂಡ ಡಾ. ಸಂಜೀವ್ "ನೋಡಿ. ಎಲ್ಲರ ಸಲಹೆಯನ್ನು ಚರ್ಚಿಸಿ ತೀರ್ಮಾನ ತೆಗೆದುಕೊಳ್ಳುವ ಡೆಮಾಕ್ರಸಿ ಈಗ ಪ್ರಯೋಜನವಿಲ್ಲ. ನಾನೊಂದು ಕಡೆ ನಡೆಯುತ್ತೇನೆ. ಅದೃಷ್ಟವಿದ್ದರೆ ಇವತ್ತಿನ ರಾತ್ರಿ ಕಳೆಯಲು ಒಂದು ಬಯಲು ಸಿಕ್ಕರೂ ಸಿಗಬಹುದು. ಫಾಲೊ ದಿ ಲೀಡರ್" ಎಂದು ಘೋಷಿಸಿದವರೇ, ಕೊಂಚ ಕೆಳಕ್ಕೆ ಇಳಿದು ಎಡಕ್ಕೆ ಹೊರಳಿದರು. ನಿರ್ವಾಹವಿಲ್ಲದೆ ಅವರ ಹಿಂದೆ ಕುರಿಗಳಂತೆ ಹೊರಟೆವು. ಪಂಚಮಿ ಹಬ್ಬಕ್ಕೆ ಕಟ್ಟಿದ ಉಯ್ಯಾಲೆಯ ಹಗ್ಗಗಳಂತೆ ಬಳ್ಳಿಗಳು ಅಡ್ಡಡ್ಡ ಬಂದು ತಡೆಯುತ್ತಿದ್ದವು. ಸರ್ಕಸ್ಸು ಮಾಡಿ ಅವನ್ನು ದಾಟಿದೆವು. ಚಾಚಿದ ಗೆಲ್ಲುಗಳನ್ನು ಸರಿಸುತ್ತ, ಸುಮ್ಮನೆ ಅರ್ಧ ಗಂಟೆ ಹತ್ತಿದೆವು. ನಂತರ ಕಾಡು ಕಡಿಮೆಯಾಗಿ ತಟ್ಟನೆ ಒಂದು ಶಿಖರದ ನೆತ್ತಿ ಸಿಕ್ಕಿತು. ಅಲ್ಲಿಂದ ನೋಡಿದರೆ ಇನ್ನೊಂದೇ ಶಿಖರದಲ್ಲಿದ್ದ ಕೊಡಚಾದ್ರಿಯ ಲೈಟುಗಳು ಕಂಡವು. ಯಾರೋ ಪ್ರವಾಸಿ ಮಂದಿರದ ಮೇಲೆ ಬೆಂಕಿಹಾಕಿಕೊಂಡು ಕ್ಯಾಂಪ್‌ಫೈರ್ ಮಾಡುತ್ತಿದ್ದರು. ಮೊಬೈಲು ದೀಪಗಳನ್ನು ಅವರತ್ತ ಬೀಸಿ 'ದಾರಿತಪ್ಪಿದ್ದೇವೆ. ರಕ್ಷಿಸಿ' ಎಂದು ಸಂದೇಶ ಕಳಿಸಿದೆವು. ಈ ಸಂದೇಶ ಅವರಿಗೆ ತಲುಪಿತೊ ಇಲ್ಲವೊ, ಅವರೂ ಬ್ಯಾಟರಿ ಬೆಳಕನ್ನು ಬೀಸಿದರು. ಆ ಅಪರಾತ್ರಿಯಲ್ಲಿ ಅಲ್ಲಿಗೆ ಬಂದು ಸಹಾಯ ಮಾಡುವುದು ಯಾರಿಗೂ ಸಾಧ್ಯವಿರಲಿಲ್ಲ.

ನಮ್ಮ ಮತ್ತು ಕೊಡಚಾದ್ರಿಯ ಶಿಖರಗಳ ನಡುವೆ ದೊಡ್ಡಬೆಟ್ಟವೊಂದು ಅಡ್ಡನಿಂತಿತ್ತು. ಎರಡು ದೊಡ್ಡ ಕಣಿವೆಗಳು ಅಡ್ಡಹಾದಿದ್ದವು.

ಅದೊಂದು ಶೋಲಾ ಕಾಡಿನ ಬೊಕ್ಕತಲೆಯಾಗಿತ್ತು. ಪಶ್ಚಿಮಘಟ್ಟದ ಕಣಿವೆಗಳಲ್ಲಿ ದಟ್ಟವಾದ ಕಾಡು ಬೆಳೆದು ಝರಿಗಳು ಹುಟ್ಟಿ ಹರಿಯುತ್ತವೆ. ತುದಿಯಲ್ಲಿ ಗಿಡಗಳಿಲ್ಲದ ಬೋರಲು ಹಾಕಿದ ಬಾಂಡ್ಲಿಯಂತಹ ಮೇಲ್ಮೈ ಮೇಲೆ ಸೊಂಪಾದ ಹುಲ್ಲು ಬೆಳೆದಿರುತ್ತದೆ. ಅದು ಕಾಡುಕೋಣ, ಜಿಂಕೆ, ಕಡವೆ ಮೇಯುವ ಜಾಗ. ರಾತ್ರಿ ಒಂದು ಗಂಟೆಯಾಗಿತ್ತು. ಅಲ್ಲೇ ವಸತಿ ಮಾಡುವುದು ಎಂದಾಯಿತು. ಆದರೆ ಬೆಂಕಿ ಹಾಕುವಂತಿಲ್ಲ. ಅದು ಅಭಯಾರಣ್ಯದ ಕಾನೂನಿಗೆ ವಿರುದ್ಧ. ಹಾಗೇ ಮಲಗಿದರೆ ಕಾಟಿಗಳ ಹಿಂಡು ತುಳಿದು ಹಾಕಬಹುದು. ಆದದ್ದಾಗಲಿ ಎಂದು ಅಲ್ಲಿದ್ದ ಕಲ್ಲದುಂಡಿಗಳನ್ನೇ ದಿಂಬು ಮಾಡಿಕೊಂಡು, ಹುಲ್ಲಿನ ಮೇಲೆ ಉರುಳಿಕೊಂಡೆವು. 'ಇನ್ನೆಲ್ಲಿಯ ನಿದ್ದೆ?' ಚಳಿಗಾಳಿ ಸುಂಯ್ಯೋ ಎಂದು ಸಶಬ್ದವಾಗಿ ಬೀಸುತ್ತಿತ್ತು. ಕಣ್ಣುಬಿಟ್ಟರೆ ನಮಗಾಗಿಯೇ ಆಗಸ ಕೆಳಗಿಳಿದು ಬಂದಂತೆ ಝುಗಮಗಿಸುವ ತಾರೆಗಳು. ಅವನ್ನು ಸವಿಯುವ ಸೌಂದರ್ಯ ಪ್ರಜ್ಞೆ ಯಾರಲ್ಲೂ ಉಳಿದಿರಲಿಲ್ಲ.

ಬೆಳ್ಳಿ ಮೂಡತೊಡಗಿತು. ಸುತ್ತಲ ಆಗಸ ತಿಳಿಯಾಗಲಾರಂಭಿಸಿತು. ತಾರೆಗಳು ಮಸುಕಾಗುತ್ತ ಚಂದ್ರ ಮುಳುಗತೊಡಗಿದನು. ತಾಯ ಹೊಟ್ಟೆಯಿಂದ ಹೊರಬರುವ ಮುನ್ನ ಸೂರ್ಯ ಕಳಿಸಿದ ಉಷೆಯ ಮಂದಪ್ರಕಾಶ ಮೂಡಣದಲ್ಲಿ ಹಬ್ಬತೊಡಗಿತು. ಐದು ಗಂಟೆಗೆ ಎಲ್ಲರನ್ನೂ ಎಬ್ಬಿಸಿ ಅಂದಾಜಿನ ಮೇಲೆ ಬಂದ ದಿಕ್ಕಿನಲ್ಲೇ ಮುಂದುವರೆದೆವು. ನೋಡಿದರೆ ನಾವು ಮಲಗಿದ್ದ ಜಾಗದ ಒಂದು ಫರ್ಲಾಂಗ್ ಫಾಸಲೆಯಲ್ಲಿ ನಿಟ್ಟೂರಿಂದ ಕೊಡಚಾದ್ರಿ ಶಿಖರಕ್ಕೆ ಹೋಗುವ ಜೀಪುರಸ್ತೆ ಇತ್ತು. ರಾತ್ರಿ ಇನ್ನೊಂದಷ್ಟು ನಡೆದಿದ್ದರೆ ಅದರ ಭೇಟಿಯಾಗುತ್ತಿತ್ತು. ಆದರೆ ಯಾರಿಗೆ ಗೊತ್ತು? ಸೂರ್ಯೋದಯ ತಪ್ಪಿಸಿಕೊಳ್ಳಬಾರದೆಂದು ಕೊಡಚಾದ್ರಿಯ ಎತ್ತರದ ಶಿಖರವೊಂದನ್ನು ಸರಸರ ಹತ್ತಲಾರಂಭಿಸಿದೆವು.

ಬೆಟ್ಟಗುಡ್ಡಗಳಲ್ಲಿ ತಿರುಗಾಡುವ ಎಲ್ಲರಿಗೂ ಇಂತಹ ಅನುಭವಗಳು ಸಾಮಾನ್ಯ. ಆದರೆ ಕೊಂಚ ಉಡಾಫೆ ಮಾಡಿದರೆ, ಈ ಅನುಭವಗಳು ಜೀವ ಕಸಿಯಬಲ್ಲವು. ಒಮ್ಮೆ ಮುಳ್ಳಯ್ಯನಗಿರಿಯಲ್ಲಿ ಶೋಲಾ ಕಾಡಿನ ಹುಲ್ಲಿಗೆ ಬೆಂಕಿಬಿದ್ದು ಕಾಡ್ಗಿಚ್ಚಿನಲ್ಲಿ ಸಿಕ್ಕಿಕೊಂಡು ಒಂದು ಟ್ರೆಕ್ಕಿಂಗ್ ತಂಡ ಉಸಿರುಗಟ್ಟಿ ಸತ್ತಿತ್ತು; ಕುಮಾರಪರ್ವತದ ಹಾದಿಯಲ್ಲಿ

ದಾರಿತಪ್ಪಿ ಸತ್ತವರು ಎಷ್ಟೋ ಜನ. ಇಂತಹ ಅಪಾಯಗಳಿದ್ದರೂ ಸೆಟೆದು ನಿಂತ ಬೆಟ್ಟಗಳನ್ನು ನೋಡಿದರೆ ಹತ್ತಬೇಕೆಂದು ಕಾಲು ಕಡಿಯತೊಡಗುತ್ತದೆ. 'ನಾನೇರುವೆತ್ತರಕೆ ನೀನೇರಬಲ್ಲೆಯಾ' ಎಂದವು ಆಹ್ವಾನಿಸಿದಂತಾಗುತ್ತದೆ. ತಮ್ಮ ದೈತ್ಯಾಕಾರದಿಂದಲೊ ಕಾಲಾತೀತ ಗುಣದಿಂದಲೊ ನಮ್ಮ ಅಹಂಕಾರವನ್ನು ಬೆಟ್ಟಗಳು ಭಗ್ನಗೊಳಿಸುತ್ತವೆ. ಅವನ್ನು ಹತ್ತಿನಿಂತರೆ ಚೂರಾದ ನಮ್ಮ ಅಹಂಕಾರವೆಲ್ಲ ಮತ್ತೆ ಕಟ್ಟಿಕೊಳ್ಳುತ್ತದೆ. ಏನಿಲ್ಲವೆಂದರೂ, ಅಜ್ಜನಂತಿರುವ ಅವುಗಳ ಹೆಗಲನೇರಿದರೆ ತೋರುವ ಸೂರ್ಯನ ಹುಟ್ಟು-ಮುಳುಗು, ವಕ್ರವಾಗಿ ಹರಿದ ನದಿ, ದೂರದಲ್ಲಿ ಹೊಳೆವ ಕನ್ನಡಿಕೆರೆಗಳು, ಗಿಡಮರಗಳ ಮರೆಯಲ್ಲಿ ಅಡಗಿದ ಊರು, ಅವುಗಳಿಂದ ಹೊರಡುವ ಅಡಿಗೆ ಹೊಗೆ, ಗೆರೆಯೆಳೆದಂತಹ ರಸ್ತೆಗಳು, ಕಸೂತಿ ಹಾಕಿದಂತಿರುವ ಹೊಲ, ಗದ್ದೆ, ತೋಟ - ಈ ಚಿತ್ರಗಳನ್ನೆಲ್ಲ ಹಕ್ಕಿನೋಟದಲ್ಲಿ ನೋಡುತ್ತ ಮನಸ್ಸಿನೊಳಗೆ ತುಂಬಿಕೊಳ್ಳುವುದಕ್ಕೆ ಆನಂದವಾಗುತ್ತದೆ.

**ಡಾ. ರಹಮತ್ ತರೀಕೆರೆ**

## ಲೇಖಕರ ಪರಿಚಯ



ಡಾ. ರಹಮತ್ ತರೀಕೆರೆ ಅವರು ಹಂಪಿ ಕನ್ನಡ ವಿಶ್ವವಿದ್ಯಾಲಯದ ಸಾಹಿತ್ಯ ಅಧ್ಯಯನ ವಿಭಾಗದ ನಿವೃತ್ತ ಪ್ರಾಧ್ಯಾಪಕರು. ಪತ್ರಿಕೆಗಳಲ್ಲಿ ಪ್ರಸಿದ್ಧ ಅಂಕಣಕಾರರು. ಸಂಶೋಧನೆ, ಸಂಪಾದನೆ, ಸಾಹಿತ್ಯ ವಿಮರ್ಶೆ, ಅನುವಾದ ಹಾಗೂ ಇನ್ನಿತರ ಅಧ್ಯಯನ ಕ್ಷೇತ್ರಗಳಲ್ಲಿ ಇವರ ಕೃತಿಗಳು ಪ್ರಕಟವಾಗಿವೆ. ಇವರಿಗೆ 2010ರಲ್ಲಿ 'ಕತ್ತಿಯಂಚಿನ ದಾರಿ' ಕೃತಿಗೆ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. **ಅಂಡಮಾನ್ ಕನಸು, ನಡೆದಷ್ಟೂ ನಾಡು, ಧರ್ಮ ಪರೀಕ್ಷೆ, ಪ್ರತಿ ಸಂಸ್ಕೃತಿ** - ಇವರ ಕೆಲವು ಕೃತಿಗಳು. ಪ್ರಸ್ತುತ ಭಾಗವನ್ನು 'ಕದಳಿ ಹೊಕ್ಕು ಬಂದೆ' ಕೃತಿಯಿಂದ ಆರಿಸಲಾಗಿದೆ.

# ಲಂಡನ್ ನಗರ

**ವಿನಾಯಕ ಕೃಷ್ಣ ಗೋಕಾಕ್**

ಲಂಡನ್ ಪಟ್ಟಣವೆಂದರೆ ಒಂದು ಸ್ವತಂತ್ರ ಜಗತ್ತು. ನನಗೆ ಮುಖ್ಯವಾಗಿ ಬೇಕಾದ Poet's Corner (ಪೊಯೆಟ್ಸ್ ಕಾರ್ನರ್) ಕವಿಗಳ ಮೂಲೆಗೆ ಹೋದೆ. ಮೊನ್ನೆ ತೀರಿಕೊಂಡ ಕಿಪ್ಲಿಂಗ್ ಕವಿಯ ಮೇಲೆ ಹಾಕಿದ ಕಲ್ಲು ಅಲ್ಲಿ ಕಣ್ಣಿಗೆ ಬಿತ್ತು. ಅದಕ್ಕೆ ತುಸು ದೂರದಲ್ಲಿಯೇ ಹಾರ್ಡಿಯು ಒರಗಿದ್ದನು. ಮ್ಯಾಕಾಲೆ, ಜಾನ್ಸನ್, ಗೋಲ್ಡ್ ಸ್ಮಿತ್, ಡ್ರಾಯ್ಡನ್ ಎಲ್ಲರಿಗೂ ಒಂದೊಂದು ಹಿಡಿ ಮಣ್ಣನ್ನು ನಾವು ಕೊಡುವಂತೆ ಒಂದೊಂದು ಕಲ್ಲನ್ನು ಇಲ್ಲಿ ಕೊಟ್ಟಿದ್ದಾರೆ. ಈ ಕಲ್ಲಿನ ಮೇಲೆ ಹಾಯ್ದಾಡುತ್ತ ನಾವು ಹೋಗುತ್ತೇವೆ. ಪ್ರತಿಯೊಂದು ಹೆಜ್ಜೆಯ ಬುಡಕ್ಕೆ ಬಿಜ್ಜೆ(ವಿದ್ಯೆ)ಯ ಭಾರವನ್ನು ತುಳಿಯುತ್ತೇವೆ. ಅಡಿಗಡಿಗೆ ಇತಿಹಾಸವನ್ನು ದಾಟುತ್ತೇವೆ! ಎಂಥ ವಿಚಿತ್ರ! ನಾನು ಹಾಯ್ದು ಹೋಗುವಾಗ ಒಂದು ಸಣ್ಣ ಕಲ್ಲು ಪಾಟಿಯ ಮೇಲೆ ಸಣ್ಣದಾದ ಅಕ್ಷರಗಳಿದ್ದವು. ತುಳಿಯುವಷ್ಟರಲ್ಲಿಯೇ ಅವು ನನ್ನ ಕಣ್ಣಿಗೆ ಬಿದ್ದುವು. ಓದಿದೆ. 'ಓ ಅಪರೂಪ ಬೆನ್ಜಾನ್ಸನ್' ಎಂದಿತ್ತು. ಎಂಥ ಪ್ರಖ್ಯಾತ ನಾಟಕಕಾರರನ್ನು ಕಾಲ್ಕೆಳಕ್ಕೆ ಹಾಕಿ ತುಳಿಯುತ್ತಿದ್ದೆನಲ್ಲ? ಎಂದುಕೊಂಡೆ! ಯಾರ ಕಣ್ಣಿಗೂ ಸಹಜವಾಗಿ ಬೀಳದ ಒಂದು ಶಿಲಾಮೂರ್ತಿಯು ಮೂಲೆಯಲ್ಲಿತ್ತು. ಮಣಿದು ಅದನ್ನು ನೋಡಿದೆ. ವರ್ಡ್ಸ್ ವರ್ತ್‌ನು ಅಲ್ಲಿ ತಪಶ್ಚರ್ಯಕ್ಕೆ ಕುಳಿತಿದ್ದನು! ವರ್ಡ್ಸ್ ವರ್ತ್‌ನಂಥವರನ್ನೂ ಅವರು ಮೂಲೆಗೊತ್ತಿ ಬಿಟ್ಟಿದ್ದಾರೆ! ಆದರೂ ಆ ಕವಿಗಳ ಮೂಲೆಯಲ್ಲಿ ನಡೆದಾಗ ಒಂದು ಭವ್ಯತೆಯು ಬಂದು ಕಣ್ಣೆದುರು ನಿಲ್ಲುತ್ತದೆ. ಹೃದಯವು ಕಂಪಿಸುತ್ತದೆ. ತಪ್ಪು ಹೆಜ್ಜೆ ಹಾಕಬಹುದೆಂಬ ಹೆದರಿಕೆಯು ಹಿಡಿದು ನಿಲ್ಲಿಸುತ್ತದೆ. ಕಡೆಗೆ ದಿಕ್ಕುತಪ್ಪಿದಂತಾಗಿ ಯಾರನ್ನು ತುಳಿದರೇನು? ಎಲ್ಲಿ ಹೆಜ್ಜೆ ಹಾಕಿದರೇನು? ಎಲ್ಲವೂ ಅಷ್ಟೆ! ಮಣ್ಣು, ಮಣ್ಣು! ಎಂದು ಮನಸ್ಸಿಗೆ ಬಂದಂತೆ ಮನುಷ್ಯನು ನಡೆಯ ಹತ್ತುತ್ತಾನೆ.

ಇದಕ್ಕೆ ಸಮೀಪವಾಗಿ ವೈಜ್ಞಾನಿಕರ ಮೂಲೆಯಿದೆ. ಇಲ್ಲಿ ನ್ಯೂಟನನ ದೊಡ್ಡದಾದ ಶಿಲಾಮೂರ್ತಿಯನ್ನು ನಿಲ್ಲಿಸಿದ್ದಾರೆ. ಡಾರ್ವಿನ್, ಹರ್ಶೆಲ್ ಮೊದಲಾದವರ ಮೇಲೆ ಕಲ್ಲೊಗೆದಿದ್ದಾರೆ. ಇದಕ್ಕೆ ಹತ್ತಿರದಲ್ಲಿ ವ್ಯಾಪಾರಿಗಳು, ವಾಸ್ತುಶಿಲ್ಪಿಗರು, ಸರದಾರರು, ಸೇನಾಪತಿಗಳು ಮೊದಲಾದ ಅನೇಕರಿಗೆ ಜಾಗವು ದೊರೆತಿದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ಲೇಖಕರು ಬಾಬಾಬುಡನ್ ಗಿರಿ ಬೆಟ್ಟದಲ್ಲಿ ಸಂತೋಷಪಡಲು ಕಾರಣವಾದ ಅಂಶಗಳು ಯಾವುವು?
2. ಲೇಖಕರಿಗೆ ವಿಭಿನ್ನ ಅನುಭವ ನೀಡಿದ ಬೆಟ್ಟಗಳು ಯಾವುವು?
3. ಕೊಡಚಾದ್ರಿಯಲ್ಲಿ ರಾತ್ರಿ ಚಾರಣ ಸಂದರ್ಭದಲ್ಲಿ ಎದುರಿಸಿದ ಸವಾಲುಗಳೇನು?
4. ಬೆಟ್ಟಗುಡ್ಡಗಳ ಚಾರಣವು ನಮಗೆ ಕಲಿಸುವ ಪಾಠವೇನು?

### ಟಿಪ್ಪಣಿ ಬರೆಯಿರಿ

ಬೆಟ್ಟಗಳು 'ನಾನೇರುವೆತ್ತರಕೆ ನೀನೇರಬಲ್ಲೆಯಾ' ಎಂದು ಆಹ್ವಾನಿಸಿದಂತಾಗುತ್ತದೆ - ಈ ಮಾತಿನ ಅರ್ಥವನ್ನು ವಿವರಿಸಿರಿ.

### ಅನುಮತಿ ಪತ್ರ ತಯಾರಿಸಿರಿ

ನಿಮ್ಮ ಶಾಲೆಯಿಂದ ಮಂಗಳೂರಿನ ಪಿಲಿಕುಳ ನಿಸರ್ಗಧಾಮಕ್ಕೆ ಪ್ರವಾಸ ಹೋಗಲು ತೀರ್ಮಾನಿಸಿರುವಿರಿ. ಮುಂಚಿತವಾಗಿ ಅನುಮತಿ ಪಡೆದುಕೊಳ್ಳಲು ಅಲ್ಲಿನ ಆಡಳಿತ ಅಧಿಕಾರಿಗಳಿಗೆ ಪ್ರವೇಶಕ್ಕೆ ಬೇಕಾದ ಅನುಮತಿಯನ್ನು ಒದಗಿಸಿ ಕೊಡುವಂತೆ ಪತ್ರವೊಂದನ್ನು ಬರೆಯಿರಿ.

### ಜಾಹೀರಾತು ತಯಾರಿಸಿರಿ

ಬೆಟ್ಟಗಳಿಗೆ ಚಾರಣ ಏರ್ಪಡಿಸಿದ ಸಂಸ್ಥೆಯೊಂದು ಗ್ರಾಹಕರನ್ನು ಆಹ್ವಾನಿಸುವ ವಿಷಯವಾಗಿ ಒಂದು ಜಾಹೀರಾತು ತಯಾರಿಸಿರಿ.

## ಮಾಹಿತಿ ಸಂಗ್ರಹ

ಲಂಡನ್ ನಗರದಲ್ಲಿರುವ ಕವಿಗಳ, ವಿಜ್ಞಾನಿಗಳ, ಸ್ಮಾರಕಗಳ ಕುರಿತು ಓದಿದಿರಲ್ಲವೇ? ಕನ್ನಡದ ಕವಿಗಳ ಸ್ಮಾರಕಗಳು, ಪ್ರವಾಸಿ ತಾಣಗಳಾಗಿರುವ ಸ್ಥಳಗಳ ಕುರಿತು ಮಾಹಿತಿ ಸಂಗ್ರಹಿಸಿ ಬರೆಯಿರಿ.

## ಓದುಗರ ಓಲೆಗೆ ಬರೆಯಿರಿ

ಅದೊಂದು ಶೋಲಾ ಕಾಡಿನ ಬೊಕ್ಕತಲೆಯಾಗಿತ್ತು ........................... ಅಲ್ಲೇ ವಸತಿ ಮಾಡುವುದು ಎಂದಾಯಿತು. ಆದರೆ ಬೆಂಕಿ ಹಾಕುವಂತಿಲ್ಲ.

ಪಾಠಭಾಗದ ಮೇಲಿನ ಮಾತಿನ ಆಧಾರದಲ್ಲಿ, ವಾಸ್ತವ್ಯ ಹೂಡುವ ಅರಣ್ಯಪ್ರದೇಶಗಳಲ್ಲಿ ಬೆಂಕಿ ಹಾಕಿದರೆ ಆಗುವ ಅನಾಹುತಗಳ ವಿವಿಧ ಆಯಾಮಗಳನ್ನು ಚರ್ಚಿಸಿ ಪ್ರವಾಸಿಗರು ತೆಗೆದುಕೊಳ್ಳಬೇಕಾದ ಜಾಗರೂಕತೆಗಳ ಕುರಿತು ಜಾಗೃತಿ ಮೂಡಿಸಲು ಪತ್ರಿಕೆಯ ಓದುಗರ ಓಲೆಗೆ ಪತ್ರ ಒಂದನ್ನು ಬರೆಯಿರಿ.

## ಪದ ವಿಂಗಡಿಸಿರಿ

- ದಟ್ಟಾರಣ್ಯ
- ದಾರಿಯಾಗಿರದೆ
- ಉಸಿರುಗಟ್ಟಿ
- ದೈತ್ಯಾಕಾರ
- ಒಂದಿರುಳು

## ಸ್ವಂತ ವಾಕ್ಯ ರಚಿಸಿರಿ

ಅಡಿಗೆರೆ ಎಳೆದ ಪದ ಬಳಸಿ ಸ್ವಂತ ವಾಕ್ಯ ರಚಿಸಿರಿ

1. ಗುಡ್ಡದ ತುದಿ ಸಿಗಲೇ ಬೇಕು ಎಂಬ ಹುಂಬ ತರ್ಕದಲ್ಲಿ ಬಲಗಡೆಯ ಸೀಳನ್ನು ಹಿಡಿದು ಹೊರಟೆವು.

2. ದೇವರ ಗುಡಿಯಿಂದ ಬೇಗ ಹೊರಡುವುದಕ್ಕೆ ಚಡಪಡಿಸುತ್ತಿದ್ದ ಡ್ರೈವರ್‌ನನ್ನು ಇತರರು ಸಮಾಧಾನಪಡಿಸಿದರು.

## ವಿಶೇಷತೆಗಳನ್ನು ಬರೆಯಿರಿ

ಕೆಳಗಿನ ವಾಕ್ಯದಲ್ಲಿ ಅಡಿಗೆರೆ ಎಳೆದ ಪದಗಳ ಪ್ರಯೋಗದಲ್ಲಿ ವಿಶೇಷತೆಗಳನ್ನು ಬರೆಯಿರಿ.

- ಬೆಟ್ಟಗುಡ್ಡಗಳನ್ನು ಹತ್ತಲೆಳಸುವುದು ನನಗೆ ಚಿಕ್ಕಂದಿನಿಂದಲೂ ಇದ್ದಿರುವ ದುರಭ್ಯಾಸಗಳಲ್ಲಿ ಒಂದು.
- ದೂರದಲ್ಲಿ ಹೊಳೆವ ಕನ್ನಡಿಕೆರೆಗಳು, ಗಿಡಮರಗಳ ಮರೆಯಲ್ಲಿ ಅಡಗಿದ ಊರು, ಅವುಗಳಿಂದ ಹೊರಡುವ ಅಡಿಗೆ ಹೊಗೆ, ಗೆರೆಯೆಳೆದಂತಹ ರಸ್ತೆಗಳು, ಕಸೂತಿ ಹಾಕಿದಂತಿರುವ ಹೊಲ, ಗದ್ದೆ, ತೋಟ - ಈ ಚಿತ್ರಗಳನ್ನೆಲ್ಲ ಹಕ್ಕಿನೋಟದಲ್ಲಿ ನೋಡುತ್ತ ಮನಸ್ಸಿನೊಳಗೆ ತುಂಬಿಕೊಳ್ಳುವುದಕ್ಕೆ ಆನಂದವಾಗುತ್ತದೆ.

## ಅನ್ಯ ದೇಶಿಯ ಪದ ಬರೆಯಿರಿ

ಲೈಟ್, ಬ್ಯಾಟರಿ ಅನ್ಯದೇಶೀಯ ಪದಗಳು. ಅನೇಕ ಅನ್ಯ ಭಾಷಾ ಪದಗಳಿಂದ ಇಂದಿನ ಕನ್ನಡ ಭಾಷೆಯು ಶ್ರೀಮಂತವಾಗಿದೆ. ಈ ಪಾಠಭಾಗದಲ್ಲಿ ಬಂದ ಅನ್ಯದೇಶೀಯ ಪದಗಳನ್ನು ಪಟ್ಟಿ ಮಾಡಿರಿ.

## ಪದ ರಚಿಸಿರಿ

ಈ ಕೆಳಗಿನ ಪದಗಳ ಅಕ್ಷರಗಳನ್ನು ಬಳಸಿ ಹೆಚ್ಚಿನ ಪದಗಳನ್ನು ರಚಿಸಿರಿ.

1. ಬಾಬಾಬುಡನ್ ಗಿರಿ
2. ನಯನಮನೋಹರ

## ಅನುಭವ ಕಥನ ಬರೆದು ಸಂಚಿಕೆ ತಯಾರಿಸಿರಿ

ಲೇಖಕರ ಕೊಡಚಾದ್ರಿ ಬೆಟ್ಟದ ಚಾರಣದ ಅನುಭವವನ್ನು ಓದಿರುವಿರಿ. ನೀವು ಭೇಟಿ ನೀಡಿದ ಒಂದು ಪ್ರೇಕ್ಷಣೀಯ ಸ್ಥಳದ ಪ್ರವಾಸದ ಅನುಭವ ಕಥನ ಬರೆಯಿರಿ. ತರಗತಿಯಲ್ಲಿ ಎಲ್ಲರ ಅನುಭವ ಕಥನಗಳನ್ನು ಒಟ್ಟುಸೇರಿಸಿ ಸಂಚಿಕೆ ತಯಾರಿಸಿರಿ.

## ಪ್ರವಾಸ ಕಥನ ಓದಿರಿ

ಶಾಲಾ ಗ್ರಂಥಾಲಯದಿಂದ ವಿವಿಧ ಲೇಖಕರ ಪ್ರವಾಸ ಕಥನಗಳನ್ನು ಸಂಗ್ರಹಿಸಿ ಓದಿರಿ.

# ಲಾಲ್‌ಬಾಗ್

ಕೆಂಪುವೂ ಸಾಲ್ಮರನ ದಾರಿಯಲಿ ನಡೆನಡೆದು
ಕೆಂಪು ತೋಟಕೆ ಬನ್ನಿ ವಿಶ್ರಾಂತಿಗೆ.
ಒಮ್ಮೆಗೇ ಕಾಣುವುವು ಬಿಳಿ ಹಸುರು ಕೆಂಪುಗಳು
ಕಣ್ಣ ರಂಜಿಸಿಕೊಳುವ ಎಲ್ಲ ರಂಗುಗಳು.

ಎಲ್ಲೆಲ್ಲು ತಳಿರು ಹೂ, ಎಲ್ಲೆಲ್ಲು ಹಸಿರುಗಳು
ಹಸುರು ಹೊಂಗೆಂಪುಗಳ ಮೇಲಾಟವು.
ಮರದ ಇಂಬಿಗೆ ಬಾಗಿ ಬಳುಕುತಿರುವೆಳಲತೆಯು
ತಳಿರ ತೂಗುಯ್ಯಾಲೆ ಹೂ ತೊಂಗಲು



ನಾ ಮುಂದೆ ತಾ ಮುಂದೆ ಎಂಬ ಆತುರದಿಂದ
ಹೋದ ತಿಂಗಳೆ ತೋಟ ಚಿಗುರಿಟ್ಟಿತು.
ಮಾವು ಹೊಂಗೆಯು ಬೇವು ಮಾಧವೀಲತೆ ಬೇಲ
ದೂರ ದೇಶದ ಸುಳಿಯ ನೂರು ಜಾತಿಗಳು.

ಒಂದೊಂದೆ ಸೊಗವೆತ್ತಿ ತಂಪೆತ್ತಿ ಚಿಗುರಿದುವು
ಬರಲು ಕೊಂಬೆಗಳೆಲ್ಲ ಹಸುರುಟ್ಟುವು.
ತಳಿರ ಮೈಯನು ತೆರೆದು ನಿನ್ನೆ ಕಾಣಿಸುತಿದ್ದ
ಈ ಮರನು ಮೈ ತುಂಬ ಅರಳಿರುವುದು.
ಅಡಿಯಿಂದ ತುದಿವರೆಗು ಎಲೆಯು ಕಾಣಿಸದಂತೆ
ಕಿಕ್ಕಿರಿವ ಹೂವಿನಲಿ ಅರಳಿರುವುದು.

**ವಿ. ಸೀತಾರಾಮಯ್ಯ**

## ಕವಿ ಪರಿಚಯ



ವಿ. ಸೀತಾರಾಮಯ್ಯ (02.10.1899) ಅವರು ವಿ.ಸೀ ಎಂದೇ ಖ್ಯಾತರಾದವರು. ಬೆಂಗಳೂರು ಜಿಲ್ಲೆಯ ಬೂದಿಗೆರೆ ಗ್ರಾಮದಲ್ಲಿ ಜನಿಸಿದರು. 1922 ರಲ್ಲಿ ಎಮ್.ಎ ಪದವಿ ಪಡೆದ ಇವರ 'ಅರಲು ಬರಲು' ಕೃತಿಗೆ 1973 ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಲಭಿಸಿದೆ. **ದೀಪಗಳು, ಗೀತೆಗಳು, ನೆರಳು ಬೆಳಕು, ದ್ರಾಕ್ಷಿ ದಾಳಿಂಬೆ, ಹೆಜ್ಜೆ ಪಾಡು** ಇವರ ಇತರ ಕೆಲವು ಕವನ ಸಂಕಲನಗಳಾಗಿವೆ. **ಸೊಹ್ರಾಬ್ ರುಸ್ತುಮ್ (ನಾಟಕ), ಪಂಪಯಾತ್ರೆ, ಕರ್ನಾಟಕ ಕಾದಂಬರಿ, ಅಶ್ವತ್ಥಾಮನ್** ಮೊದಲಾದವು ಇವರ ಗದ್ಯಕೃತಿಗಳಾಗಿವೆ. 'ಮಹನೀಯ' ಮತ್ತು ವಿವರಣಾತ್ಮಕ ಪ್ರಬಂಧ 'ಕೃಷ್ಣ ಚರಿತ್ರೆ'ಗೆ ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ದೊರೆತಿದೆ. 4 ಸೆಪ್ಟೆಂಬರ್ 1983 ರಂದು ಇವರು ನಿಧನ ಹೊಂದಿದರು.

## ಚಟುವಟಿಕೆಗಳು

### ಹಾಡಿರಿ

'ಲಾಲ್‌ಬಾಗ್' ಕವನವನ್ನು ರಾಗವಾಗಿ ಹಾಡಿರಿ.

### ಉತ್ತರಿಸಿರಿ

1. ಕವಿಯು ಕೆಂಪು ತೋಟಕೆ ಯಾಕಾಗಿ ಕರೆಯುತ್ತಿದ್ದಾರೆ ?
2. ಹೂ ತೋಟದಲ್ಲಿ ಯಾವೆಲ್ಲಾ ವಿಧದ ಗಿಡಗಳಿವೆ ?
3. ಕವಿ ತೋಟದ ತಳಿರ ತೂಗುಯ್ಯಾಲೆಯನ್ನು ಹೇಗೆ ವರ್ಣಿಸುತ್ತಾರೆ?
4. ಮರದಲ್ಲಿ ಉಂಟಾದ ಬದಲಾವಣೆಗಳನ್ನು ಕವಿ ಹೇಗೆ ವರ್ಣಿಸಿದ್ದಾರೆ?

### ಆಶಯ ಬರೆಯಿರಿ

ಕವನದ ಆಶಯವನ್ನು ಬರೆಯಿರಿ.

### ಪತ್ರ ಬರೆಯಿರಿ

ಕವಿಯು ಲಾಲ್‌ಬಾಗ್ ಹೂತೋಟದ ಸೌಂದರ್ಯವನ್ನು ವರ್ಣಿಸಿದ್ದಾರೆ . ನೀವು ಭೇಟಿ ನೀಡಿದ ಒಂದು ಪ್ರೇಕ್ಷಣೀಯ ಸ್ಥಳದ ವಿವರಣೆಯನ್ನು ಗೆಳೆಯ / ಗೆಳತಿಗೆ ಪತ್ರದ ಮೂಲಕ ಬರೆಯಿರಿ.

### ಸೂಚನಾ ಫಲಕ ತಯಾರಿಸಿರಿ

ಲಾಲ್ ಬಾಗ್ ಒಂದು ಸುಂದರ ಉದ್ಯಾನವನ. ಅಲ್ಲಿನ ಪರಿಸರವನ್ನು ಕಾಪಾಡಿಕೊಳ್ಳಲು ಅಲ್ಲಲ್ಲಿ ಸ್ಥಾಪಿಸಬಹುದಾದ ಕೆಲವು ಸೂಚನಾ ಫಲಕಗಳಲ್ಲಿ ಬರೆಯಬಹುದಾದ ಸೂಚನೆಗಳನ್ನು ರಚಿಸಿರಿ.

## ಸ್ವಾರಸ್ಯ ಬರೆಯಿರಿ

ಈ ಕವನದ ಕೆಳಗಿನ ಸಾಲುಗಳ ಸ್ವಾರಸ್ಯ ಬರೆಯಿರಿ.

ಒಂದೊಂದೆ ಸೊಗವೆತ್ತಿ ತಂಪೆತ್ತಿ ಚಿಗುರಿದುವು
ಬರಲು ಕೊಂಬೆಗಳೆಲ್ಲ ಹಸುರುಟ್ಟುವು.

## ಕವನ ರಚಿಸಿರಿ

ನೀವು ನೋಡಿದ ಮುಂಜಾವಿನ ಸೊಬಗು, ಹೂದೋಟ, ಹೂ.......... ಕುರಿತು ಒಂದು ಕವನ ಬರೆಯಿರಿ. ತರಗತಿಯಲ್ಲಿ ಮೂಡಿಬಂದ ಕವನಗಳನ್ನು ಸೇರಿಸಿ ಕವನ ಸಂಕಲನ ತಯಾರಿಸಿರಿ.

## ಪದ ವಿಂಗಡಣೆ

ಕೆಳಗೆ ನೀಡಿದ ಪದಗಳನ್ನು ಸೂಕ್ತ ರೀತಿಯಲ್ಲಿ ವಿಂಗಡಿಸಿ ಬರೆಯಿರಿ.

- ಸೊಗವೆತ್ತಿ
- ಚಿಗುರಿಟ್ಟಿತು
- ಹಸುರುಟ್ಟವು
- ಕೊಂಬೆಗಳೆಲ್ಲ
- ಒಂದೊಂದು

## ಅರ್ಥವನ್ನು ತಿಳಿಯುವ

ಕವನದಲ್ಲಿರುವ ನವೀನ ಪದಗಳನ್ನು ಗಮನಿಸಿರಿ. ಅವುಗಳನ್ನು ಅಕಾರಾದಿಯಾಗಿ ಬರೆದು ಅರ್ಥಕೋಶದ ಸಹಾಯದಿಂದ ಅವುಗಳ ಅರ್ಥವನ್ನು ಬರೆಯಿರಿ.

- ಆತುರ, ತಳಿರು, ಬರಲು, ಮೇಲಾಟ, ತೊಂಗಲು, ಸೊಗ, ಮಾಧವೀಲತೆ, ಇಂಬು, ಕಿಕ್ಕಿರಿ

## ಪದಬಂಡಿ

ಸಾಲ್ಮರ - ರವಿ - ವಿಮಾನ - ........................................................

ಮಾದರಿಯಂತೆ ಪದಬಂಡಿಯನ್ನು ಮುಂದುವರಿಸಿರಿ.

# ಪಶ್ಚಿಮ ಘಟ್ಟಗಳ ಪತನ

ಕನ್ನಡ ನಾಡಿನ ಯಾವ ಮೂಲೆಯಲ್ಲಿದ್ದರೂ ನೀವು ಪಶ್ಚಿಮ ಘಟ್ಟಗಳ ಪ್ರಭಾವದಿಂದ ದೂರವಿರಲಾರಿರಿ. ಉದಾಹರಣೆಗೆ, ವಿದ್ಯುತ್ ದೀಪದ ಬೆಳಕಿನಲ್ಲಿ ನೀವು ಈ ಲೇಖನ ಓದುತ್ತಿದ್ದರೆ, ಪಶ್ಚಿಮ ಘಟ್ಟಗಳಿಂದ ಹರಿದು ಬಂದ ನದಿಯೇ ನೀವಿದ್ದಲ್ಲಿ ಬೆಳಕು ಹರಿಸುತ್ತದೆ. ಹೊರಗೆ ಸುರಿಯುವ ಜಡಿ ಮಳೆ, ತೇವ ತುಂಬಿದ ಗಾಳಿಗೆ ಆ ಘಟ್ಟ ಸಾಲುಗಳೇ ಕಾರಣ. ಇದೀಗತಾನೆ ತಂದಿಟ್ಟ ಬಿಸಿ ಕಾಫಿ ಹೀರುತ್ತಿದ್ದೀರೋ, ಪ್ರಾಯಶಃ ಕಾಫಿ ಮಾಡಲು ಪಶ್ಚಿಮ ಘಟ್ಟದ್ದೇ ಕಾಫಿಪುಡಿಯನ್ನು ಬಳಸಿರಬಹುದು. ಅದನ್ನು ತುಂಬಿ ತಂದ ಸ್ಟೀಲ್ ಲೋಟಕ್ಕೂ ಪಶ್ಚಿಮ ಘಟ್ಟಗಳ ಖನಿಜವನ್ನೇ ಉಪಯೋಗಿಸಿರಬಹುದು. ಕಾಫಿ ಕುಡಿದು ಲವಂಗ, ಏಲಕ್ಕಿಮಿಶ್ರಿತ ಸುವಾಸನೆ ಅಡಿಕೆಪುಡಿ ಬಾಯಿಗೆ ಹಾಕಿಕೊಂಡರೆ ಮತ್ತೆ ಆ ಘಟ್ಟಗಳ ನೆನಪಾಗಬೇಕು.

ಇದೊಂದೂ ಪರಿಕರವಿಲ್ಲದೆ ಖಾಲಿ ಬೆತ್ತದ ಕುರ್ಚಿಯ ಮೇಲೆ ಕೂತು ಈ ಲೇಖನ ಓದಲು ಪ್ರಾರಂಭಿಸಿದರೋ, ಕೂತ ಕುರ್ಚಿಯ ಬೆತ್ತವನ್ನೇ ಒಮ್ಮೆ ಸವರಿ ನೋಡಿ, ಸಾಕು. ಅದೂ ಬೇಡವೆಂದರೆ ಬಿದಿರಿನಿಂದ ತಯಾರಿಸಿದ ಈ ಕಾಗದವನ್ನೇ ನೋಡಿ. ಪಶ್ಚಿಮ ಘಟ್ಟಗಳ ಹತ್ತು ಹಲವು ಕತೆಗಳು ಇದರಲ್ಲಿ ಹುದುಗಿವೆ.

ಇನ್ನೊಂದು ವಿಧಾನದಲ್ಲೂ ನೀವು ಆಗಾಗ ಘಟ್ಟಗಳನ್ನು ಸ್ಮರಿಸಿಕೊಳ್ಳಬಹುದು. ಇದ್ದಕ್ಕಿದ್ದಂತೆಯೇ ವಿದ್ಯುತ್ ಕಡಿತವುಂಟಾಗಿ ಓದು ಭಂಗವಾದರೆ ಅದು ಆ ಘಟ್ಟಗಳನ್ನು ಅತಿಯಾಗಿ ದೋಚಿದ್ದುದರ ಪರಿಣಾಮವಿರಬಹುದು. ಹವಾಮಾನದ ಏರುಪೇರು, ಅತಿವೃಷ್ಟಿ, ಭೂಕುಸಿತ, ಪ್ರವಾಹಪೀಡೆ, ಕುಡಿಯುವ ನೀರಿನ ಅಭಾವ, ಸಾಂಕ್ರಾಮಿಕ ರೋಗ ಈ ಎಲ್ಲಾ ಅಧ್ವಾನಗಳಿಗೆ ನೀವು ಸುತ್ತುಬಳಸಿಯಾದರೂ ಸಹ್ಯಾದ್ರಿ ಪರ್ವತ ಶ್ರೇಣಿಯ ಸಂಬಂಧ ಕಲ್ಪಿಸಿಕೊಳ್ಳಬಹುದು.

ಮೇಲೆ ಆಕಾಶಕ್ಕೆ ಮುಖಮಾಡಿ ಬೆಳೆದ ಸದಾ ಹಸಿರಿನ ದಟ್ಟ ಕಾಡು, ಸೂರ್ಯನ ಸೆಕೆ ತಾಗದ ಕಾಲಡಿಯಲ್ಲಿ ಕತ್ತಲು ಕವಿದಿರುವ ಗೊಂಡಾರಣ್ಯ, ಜೇನು, ಜೀರುಂಡೆ, ಕೀಟ,

ಪತಂಗಗಳಿಂದ ಹಿಡಿದು, ಕಾಡೆಮ್ಮೆ ಮದ್ದಾನೆಗಳವರೆಗೂ ಅಸಂಖ್ಯ ಜೀವಕೋಟಿಗಳ ಆಶ್ರಯತಾಣ. ಧುಮ್ಮಿಕ್ಕುವ ಜಲಪಾತ, ಬಿಸಿ ನೀರಿನ ಬುಗ್ಗೆ, ಹಿಮಶೀತಲ ಸರೋವರ, ಸೂಜಿಮೊನೆಯಂಥ ಶಿಖರ, ದುರ್ಗಮ ಪ್ರಪಾತವೇ ಮುಂತಾದ ಉಬ್ಬುತಗ್ಗಿನ ವೈಚಿತ್ರ್ಯಗಳ ಗುಡಾಣ.

ಕೆಳಗೆ, ನೆಲದೊಳಗೆ ಖಜಾನೆ. ತಾಮ್ರ, ನಿಕ್ಕಲ್, ಮ್ಯಾಂಗನೀಸ್, ಕಬ್ಬಿಣ, ಬಾಕ್ಸಾಯಿಟ್, ಯುರೇನಿಯಂ, ಗ್ರಾಫಾಯಿಟ್, ಕ್ರೋಮಾಯಿಟ್ ಖನಿಜಗಳ ಶೇಖರಣೆ. ನೀರಿನಲ್ಲಿ ತೇಲಬಲ್ಲ ಲಾವಾ ಬಂಡೆಗಳು, ಬಿಲ್ಲಿನಂತೆ ಬಾಗಬಲ್ಲ ಮರಳು ಕಲ್ಲುಗಳು, ವಜ್ರದಂತೆ ಮಿರುಗುವ ಅಮೆಥಿಸ್ಟ್ ಹರಳುಗಳು, ಮೇಣದಂತೆ ಕರಗುವ ಝಿಯೋಲೈಟ್ ಖನಿಜಗಳ ನಿಸರ್ಗನಿರ್ಮಿತ ಸಂಗ್ರಹಾಲಯ.

ಪಶ್ಚಿಮ ಘಟ್ಟಗಳ ನಿಜವಾದ ಪತನ ಪ್ರಾರಂಭವಾದದ್ದು ಸ್ವಾತಂತ್ರ್ಯ ಬಂದ ಮೇಲೆ. ಒಂದು ಕಡೆ ಏರುತ್ತಿರುವ ಜನಸಂಖ್ಯೆಯಿಂದಾಗಿ ಕೃಷಿ ಭೂಮಿಯ ವಿಸ್ತರಣೆಗೆಂದು ರೈತರು ಅರಣ್ಯ ಕಡಿದು ಅತಿಕ್ರಮ ಸಾಗುವಳಿ ಆರಂಭಿಸಿದ್ದು. ಇನ್ನೊಂದು ಕಡೆ, ಅರಣ್ಯಹುಟ್ಟುವಳಿಗಳಾದ ಮೆಣಸು, ದಾಲಚಿನ್ನಿ, ಜೇನು, ಧೂಪ, ದಂತ, ರಾಳ, ಬಗಿನೆ, ಬಿದಿರುಗಳಿಗೆ ಬೇಡಿಕೆ ಹೆಚ್ಚಾದ್ದರಿಂದ ಹಣದಾಸೆಗೆ ಕಾಡು ದೋಚುವವರ ಸಂಖ್ಯೆ



ಹೆಚ್ಚಾದದ್ದು. ಇವೆಲ್ಲಕ್ಕಿಂತ ಹೆಚ್ಚಾಗಿ ದೇಶದ ಅಭಿವೃದ್ಧಿಗೆಂದು ಉದ್ದಿಮೆಗಳನ್ನು ಸ್ಥಾಪಿಸಿ ಖನಿಜ, ವಿದ್ಯುತ್ತಿಗೆಂದು ಸರಕಾರವೇ ಪಶ್ಚಿಮ ಘಟ್ಟಕ್ಕೆ ಲಗ್ಗೆ ಹಾಕಿದ್ದು. ಕಾಪಾಡಬೇಕಿದ್ದ ಮಾಲೀಕನೇ ತನ್ನ ನೂರು ತೋಳುಗಳಿಂದ ಕಾಡಿಗೆ ಕೊಡಲಿ ಬೀಸಿದ್ದು, ತಾನು ದೋಚುವುದಷ್ಟೇ ಅಲ್ಲದೆ, ದೋಚಲು ಸಿದ್ಧರಾದ ಖಾಸಗಿ ಉದ್ದಿಮೆದಾರರನ್ನಲ್ಲಿಗೆ ಕರೆದು ಕೊಡಲಿ, ಗುದ್ದಲಿ, ಸಿಡಿಮದ್ದು ನೀಡಿದ್ದು.

ಈ ಕೊಡಲಿ, ಗುದ್ದಲಿ, ಸಿಡಿಮದ್ದುಗಳಿಂದ ಪಶ್ಚಿಮಘಟ್ಟಗಳು ತತ್ತರಿಸುತ್ತಿವೆ. ನೋಡನೋಡುತ್ತ ನಿರ್ನಾಮವಾಗುತ್ತಿವೆ.

ಸಹ್ಯಾದ್ರಿ ಸಹನೆ ಕಳೆದುಕೊಳ್ಳುತ್ತಿದೆ. ಸಹಸ್ರಾರು ವರುಷಗಳಿಂದ ವಿವಿಧ ಬಗೆಯ ಜೀವಕೋಟಿಗಳಿಗೆ ಆಶ್ರಯ ನೀಡಿದ ಈ ಸಹ್ಯಪರ್ವತವು ಈಗ ಅಸಹ್ಯ ಪರ್ವತವಾಗುತ್ತಿದೆ.

ಅರಣ್ಯಗಳ ಎಡೆಬಿಡದ ಬಳಕೆಯಿಂದಾಗಿ ಭೂಮಿಯ ಮೇಲಿನ ಮಣ್ಣಿನ ಕವಚ ತೊಳೆದುಹೋಗುತ್ತಿದೆ. ಕೆರೆ, ಸರೋವರ, ನದಿ, ಒಡ್ಡು, ಅಣೆಕಟ್ಟುಗಳಲ್ಲಿ ಶೀಘ್ರಗತಿಯಲ್ಲಿ ಹೂಳು ತುಂಬಿ, ನೀರಿನ ನಿಕ್ಷೇಪ ಖಾಲಿಯಾಗುತ್ತಿದೆ.

ಮಳೆಯ ರಭಸವನ್ನು ತಡೆದು ನೀರನ್ನು ನಿಧಾನವಾಗಿ ಭೂಮಿಯೊಳಕ್ಕೆ ಇಂಗಿಸಬೇಕಿದ್ದ ಮರಗಳು ಕಡಿಮೆಯಾದುದರಿಂದ ಪ್ರವಾಹದ ಹಾವಳಿ ಹೆಚ್ಚುತ್ತಿದೆ. ಭೂಕುಸಿತ ಅತಿಯಾಗುತ್ತಿದೆ. ಅಂತರ್ಜಲ ಕಡಿಮೆಯಾಗಿ ಬೇಸಗೆಯಲ್ಲಿ ನದಿಗಳು ಬತ್ತತೊಡಗಿವೆ. ವನ್ಯಮೃಗಗಳಿಗೆ ಆಶ್ರಯ ತಪ್ಪಿಹೋಗಿ ಹೊಲ ಗದ್ದೆಗಳಿಗೆ ದಾಳಿ ಆರಂಭಿಸಿವೆ. ಎಲ್ಲೋ ಮೂಲೆಯಲ್ಲಿ ಹುಟ್ಟಿ ಯಾರಿಗೂ ಗೊತ್ತಿಲ್ಲದಂತೆ ಎಲೆಮರೆಯಲ್ಲಿ ಮುದುರಿಕೊಂಡಿದ್ದ ಕ್ಯಾಸನೂರು ರೋಗಾಣುಗಳು ಕಾಡುಬಿಟ್ಟು ನಾಡಿಗೆ ಹಬ್ಬುತ್ತಿವೆ. ಏಕಜಾತಿ ಸಸ್ಯಗಳಿಂದಾಗಿ ಕೀಟಗಳ ಹಾವಳಿ, ರೋಗಗಳ ಹಾವಳಿ ಹೆಚ್ಚುತ್ತಿವೆ. ಇಂಥ ಕಾಡುಗಳಲ್ಲಿ ಮೇಯಲು ಹೋದ ಗರ್ಭಿಣಿ ಜಾನುವಾರುಗಳ ಗರ್ಭಪಾತವಾಗುವುದು ಹೆಚ್ಚುತ್ತಿದೆ.

ಪೆಟ್ಟುತಿಂದ ಪ್ರಕೃತಿ ಮೊದಮೊದಲು ಮೆಲ್ಲಗೆ ಪ್ರತಿಭಟಿಸಿತು. ಯಾರೂ ಪ್ರತಿಭಟನೆಯನ್ನು ಲಕ್ಷ್ಯಕ್ಕೆ ತಾರದೆ ಅರಣ್ಯಗಳ ಸೂರೆಯನ್ನು ಮುಂದುವರಿಸಿದಾಗ ಪ್ರಕೋಪ ಹೆಚ್ಚಾಯಿತು. ಘಾಸಿಗೊಂಡ ಪಶ್ಚಿಮ ಘಟ್ಟಗಳ ಕೋಪತಾಪದ ಪ್ರಭಾವ,

ಕಾಡು, ಗುಡ್ಡಗಾಡುಗಳ ಪರಿಮಿತಿಯನ್ನೂ ಮೀರಿ ಬಯಲಿಗೆ ಬಂತು; ಕರಾವಳಿಗೆ ಬಂತು. ಇಡೀ ದಕ್ಷಿಣ ಭಾರತದ ಹವಾಮಾನದ ಏರುಪೇರುಗಳಿಗೆ, ಅತಿವೃಷ್ಟಿ, ಅನಾವೃಷ್ಟಿ, ಚಂಡಮಾರುತಗಳಿಗೆಲ್ಲ ಪಶ್ಚಿಮ ಘಟ್ಟವೇ ಕಾರಣವೆಂದು ಕೆಲವರಾದರೂ ಊಹಿಸುವ ಮಟ್ಟಕ್ಕೆ ಸಮಸ್ಯೆ ಬಿಗಡಾಯಿಸಲಾರಂಭಿಸಿತು.

ಸಾವಿರಾರು ಬುಲ್‌ಡೋಜರ್‌ಗಳೂ, ಲಕ್ಷಾಂತರ ಲಾರಿಗಳೂ, ಕೋಟ್ಯಂತರ ಕಾಲಾಳುಗಳೂ ಲಗ್ಗೆ ಹಾಕಿರುವಾಗ, ಕೇವಲ ಬೆರಳೆಣಿಕೆಯಷ್ಟು ಮಂದಿ ಪಶ್ಚಿಮದ ಈ ಗೋಡೆಯನ್ನು ರಕ್ಷಿಸಹೊರಟರೆ ಏನೇನೂ ಸಾಲದು. ನಿಸರ್ಗದ ಈ ಖಜಾನೆಯಲ್ಲಿ ಏನೇನಿದೆಯೆಂದು ನೋಡುವ ಮೊದಲೇ ಸ್ವಾಹಾಕಾರದ ಹಾದಿಯಲ್ಲಿ ನಾವೆಲ್ಲ ಮುಂದೆ ನುಗ್ಗುತ್ತಿದ್ದರೆ, ನಮ್ಮ ಮುಂದಿನ ಪೀಳಿಗೆಯವರು ಮರುಭೂಮಿಯನ್ನು ನೋಡಲು ದೂರದ ರಾಜಸ್ಥಾನಕ್ಕೆ ಹೋಗಬೇಕಾಗಲಿಕ್ಕಿಲ್ಲ.

**ನಾಗೇಶ ಹೆಗಡೆ**

## ವಿಶದೀಕರಣ

**ಕ್ಯಾಸನೂರು ರೋಗಾಣು** - ಇದು ಒಂದು ರೀತಿಯ ಸಾಂಕ್ರಾಮಿಕ ರೋಗದ ಅಣು. ಶಿವಮೊಗ್ಗ ಜಿಲ್ಲೆಯ ಕ್ಯಾಸನೂರಿನಲ್ಲಿ ಈ ರೋಗ ಮೊದಲು ಪತ್ತೆಯಾದುದರಿಂದ ಇದನ್ನು ಕ್ಯಾಸನೂರು ರೋಗಾಣು ಎಂದು ಕರೆಯಲಾಯಿತು.

**ಯಾಣ** - ಉತ್ತರ ಕನ್ನಡ ಜಿಲ್ಲೆಯಲ್ಲಿರುವ ಪ್ರೇಕ್ಷಣೀಯ ಸ್ಥಳ

**ಲಾವಾಬಂಡೆ** - ಸಾಗರಗಳ, ಭೂಮಿಯ ಹೊರಕವಚವು ಉಬ್ಬಿ ಆದ ಪರ್ವತದ ಮಡಿಕೆಗಳಲ್ಲಿರುವ ಬಿರುಕುಗಳಿಂದ, ನೆಲದಾಳದ ತೀವ್ರ ತಾಪದಿಂದಾಗಿ ಕರಗಿದ ಘನವಸ್ತುಗಳು ಕಾದ ಕಬ್ಬಿಣದ ನೀರಿನಂತೆ ಹೊರ ಸೂಸುತ್ತದೆ. ಆ ಶಿಲಾ ದ್ರವವೇ ಲಾವ. ಭೂಮಿಯ ವಾತಾವರಣದ ಶೈತ್ಯದಿಂದಾಗಿ ಅದು ಮತ್ತೆ ಶಿಲೆಯಂತಾಗುತ್ತದೆ. ಅದೇ ಲಾವಾಬಂಡೆ.

## ಲೇಖಕರ ಪರಿಚಯ



ನಾಗೇಶ ಹೆಗಡೆ ಅವರು ಕನ್ನಡನಾಡಿನ ಅಪೂರ್ವ ವೈಜ್ಞಾನಿಕ ಬರಹಗಾರರಾಗಿದ್ದಾರೆ. ಮೂಲತಃ ವಿಜ್ಞಾನಿಯಾಗಿ ಮತ್ತು ಶಿಕ್ಷಕರಾಗಿದ್ದವರು, ಪತ್ರಿಕಾ ಪ್ರಪಂಚಕ್ಕೆ ಧುಮುಕಿ ಪತ್ರಕರ್ತರಾದವರು. 1948 ಫೆಬ್ರವರಿ 14ರಂದು ಉತ್ತರ ಕನ್ನಡ ಜಿಲ್ಲೆಯ ಸಿದ್ಧಾಪುರ ಬಳಿಯ ಬಕ್ಕೆಮನೆ ಎಂಬಲ್ಲಿ ಜನಿಸಿದರು. ನಮ್ಮೊಳಗಿನ ಬ್ರಹ್ಮಾಂಡ, ಗುಳಿಗೆ ಗುಮ್ಮ, ಗುರು ಗ್ರಹದಲ್ಲಿ ದೀಪಾವಳಿ, ಬರ್ಗರ್ ಭಾರತ ಇವರ ಕೆಲವು ಕೃತಿಗಳು. ಪ್ರಜಾವಾಣಿ ಪತ್ರಿಕೆಯಲ್ಲಿ ಮೂಡಿ ಬರುತ್ತಿದ್ದ 'ವಿಜ್ಞಾನ ವಿಶೇಷ' ಅಂಕಣವು ಓದುಗರ ಪ್ರೀತಿಗೆ ಪಾತ್ರವಾಗಿದೆ. ರಾಜ್ಯ ಸಾಹಿತ್ಯ ಅಕಾಡೆಮಿ ಪ್ರಶಸ್ತಿ ಪಡೆದ ಇವರ ಕೃತಿ 'ಇರುವುದೊಂದೇ ಭೂಮಿ'ಯಿಂದ ಈ ಗದ್ಯಭಾಗವನ್ನು ಆರಿಸಿಕೊಳ್ಳಲಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ನಮ್ಮ ದೈನಂದಿನ ಜೀವನದಲ್ಲಿ ಪಶ್ಚಿಮ ಘಟ್ಟಗಳ ಪ್ರಭಾವಗಳು ಏನು ?
2. ಪಶ್ಚಿಮ ಘಟ್ಟಗಳಲ್ಲಿ ಲಭಿಸುವ ಖನಿಜ ಲವಣಗಳು ಯಾವುವು?
3. ಪಶ್ಚಿಮ ಘಟ್ಟವನ್ನು ವೈಚಿತ್ರ್ಯ ಗುಡಾಣವೆಂದು ಯಾಕೆ ಕರೆಯುವರು?
4. ಪ್ರಕೃತಿಯು ಮಾನವನಿಗೆ ತನ್ನ ಪ್ರತಿಭಟನೆಯನ್ನು ಹೇಗೆ ತೋರಿದೆ? ಸಮರ್ಥಿಸಿರಿ.

### ವಿಶ್ಲೇಷಿಸಿ ಬರೆಯಿರಿ

ಸಹ್ಯ ಪರ್ವತವು ಈಗ ಅಸಹ್ಯ ಪರ್ವತವಾಗುತ್ತಿದೆ - ಲೇಖಕರ ಈ ಮಾತುಗಳಿಗೆ ಕಾರಣವಾದ ವಿಚಾರಗಳನ್ನು ಪಾಠಭಾಗದ ಆಧಾರದಲ್ಲಿ ವಿಶ್ಲೇಷಿಸಿ ಬರೆಯಿರಿ.

## ಪತ್ರಿಕಾ ವರದಿ

ಶಾಲಾ ಸ್ಕೌಟ್ ಮತ್ತು ಗೈಡ್ ಸಂಘಟನೆಯ ವತಿಯಿಂದ ಸಾರ್ವಜನಿಕ ಸ್ಥಳದ ಸ್ವಚ್ಛತಾ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದು ಭಾವಿಸಿರಿ. ಅದರ ಒಂದು ಪತ್ರಿಕಾ ವರದಿ ತಯಾರಿಸಿರಿ.

## ಮನವಿ ಪತ್ರ

ನಿಮ್ಮ ಪರಿಸರದಲ್ಲಿ ಗುಡ್ಡಗಳ ನೆಲಸಮ ಪ್ರಕ್ರಿಯೆ ನಿರಂತರವಾಗಿ ನಡೆಯುತ್ತಿದೆಯೆಂದು ಊಹಿಸಿರಿ. ಕಲ್ಲು ಗಣಿಗಾರಿಕೆಯಿಂದ ಹಲವಾರು ಕುಟುಂಬಗಳು ಸಂಕಷ್ಟ ಎದುರಿಸುತ್ತಿವೆ ಎಂದು ಭಾವಿಸಿ ಅದನ್ನು ನಿಲ್ಲಿಸುವಂತೆ ಪಂಚಾಯತ್ ಅಧಿಕೃತರಿಗೆ ಒಂದು ಮನವಿ ಪತ್ರ ತಯಾರಿಸಿರಿ.

## ವಿವರಣೆ ಬರೆಯಿರಿ

ಪಶ್ಚಿಮ ಘಟ್ಟಗಳು, ಗೊಂಡಾರಣ್ಯ, ಜಲಪಾತ, ಸರೋವರ, ಶಿಖರ, ಪ್ರಪಾತಗಳ ವೈಚಿತ್ರ್ಯಗಳ ಗುಡಾಣವಾಗಿದೆ. ಇದೇ ರೀತಿಯ ನಿಮ್ಮ ಪರಿಸರದ ಯಾವುದಾದರೂ ವಿಶೇಷಗಳ ಕುರಿತು ಸ್ಥಳ ವಿವರಣೆ ತಯಾರಿಸಿರಿ.

## ಚರ್ಚಾಗೋಷ್ಠಿ

'ಆಧುನಿಕ ಅಭಿವೃದ್ಧಿ ಚಟುವಟಿಕೆಗಳು ಪರಿಸರಕ್ಕೆ ಮಾರಕ - ಅಭಿವೃದ್ಧಿಗೆ ಪೂರಕ' ಎನ್ನುವ ವಿಷಯದ ಕುರಿತು ತರಗತಿಯಲ್ಲಿ ಒಂದು ಚರ್ಚಾಗೋಷ್ಠಿಯನ್ನು ನಡೆಸಿರಿ. ಅದರ ಮುಖ್ಯಾಂಶಗಳನ್ನು ಸಂಗ್ರಹಿಸಿ ಬರೆಯಿರಿ.

## ವಿರೋಧಾರ್ಥ ಪದ

ಕೆಳಗೆ ನೀಡಲಾದ ವಾಕ್ಯಗಳಲ್ಲಿ ಅಡಿಗೆರೆ ಎಳೆದ ಪದಗಳ ವಿರೋಧಾರ್ಥ ಪದ ಬಳಸಿ ವಾಕ್ಯ ರಚಿಸಿರಿ.

- ಪ್ರಕೃತಿಯ ಸಹನೆ ಮೀರುತ್ತಿದೆ.
- ಅತಿವೃಷ್ಟಿಯು ನೆರೆಯ ಭೀತಿಗೆ ಕಾರಣವಾಗುತ್ತದೆ.
- ಗೊಂಡಾರಣ್ಯದಲ್ಲಿ ಕತ್ತಲು ಕವಿದ ವಾತಾವರಣವಿರುತ್ತದೆ.
- ವಿದ್ಯಾರ್ಥಿಗಳ ಲಕ್ಷ್ಯವು ಕಲಿಕೆಯಲ್ಲಿ ಕೇಂದ್ರೀಕೃತವಾಗಿರಬೇಕು.

## ಜೋಡಿಸಿ ಬರೆಯಿರಿ

ಕೆಳಗಿನ ಪದಗಳನ್ನು ಮಾದರಿಯಂತೆ ಬರೆಯಿರಿ.

ಲಕ್ಷ + ಅಂತರ = ಲಕ್ಷಾಂತರ

ಹಾದಿ + ಅಲ್ಲಿ =

ಸಂಗ್ರಹ + ಆಲಯ =

ಸಹ್ಯ + ಅದ್ರಿ =

## ತದ್ಭವ ರೂಪ ಬರೆಯಿರಿ

**ತದ್ಭವದ ಪರಿಚಯ**

ಕೆಳಗೆ ನೀಡಲಾದ ಸಂಸ್ಕೃತ ಪದಗಳ ತದ್ಭವ ರೂಪ ಬರೆಯಿರಿ.

ವನ, ಆಶ್ರಯ, ಆಕಾಶ, ಮೃಗ, ಸಹಸ್ರ

# 5. ಉದ್ಯೋಗ ಜಗತ್ತು

ಉದ್ಯೋಗ ಎಂಬುದು ಬಹಳ ವಿಶಾಲವಾದ ವ್ಯಾಪ್ತಿಯನ್ನು ಹೊಂದಿರುವ ಕ್ಷೇತ್ರವಾಗಿದೆ. ಈ ಕ್ಷೇತ್ರದಲ್ಲಿ ಮಾನವ ಶ್ರಮವು ಬಹಳ ಪ್ರಮುಖ ಪಾತ್ರವನ್ನು ವಹಿಸುತ್ತದೆ. ಉದ್ಯೋಗವನ್ನು ದೈಹಿಕ ಶ್ರಮ ನೈಪುಣ್ಯದ ಮತ್ತು ಮಾನಸಿಕ ಶ್ರಮ ನೈಪುಣ್ಯದ ಕಾರ್ಯಗಳೆಂದು ಎರಡು ವಿಧವಾಗಿ ವಿಂಗಡಿಸಬಹುದು. ದೈಹಿಕ ಶ್ರಮದ ಉದ್ಯೋಗಗಳ ಕಡೆಗೆ ಇತ್ತೀಚಿನ ದಿನಗಳಲ್ಲಿ ಆಕರ್ಷಣೆಯು ಕಡಿಮೆಯಾಗುತ್ತಿದೆ. ಪ್ರತಿ ಉದ್ಯೋಗಕ್ಕೂ ಅದರದ್ದೇ ಆದ ಮಹತ್ವವಿದೆ ಎಂಬ ಸತ್ಯವನ್ನು ತಿಳಿಯುವಲ್ಲಿ ವಿಫಲರಾಗುತ್ತಿದ್ದೇವೆ. ಈಗ ಉದ್ಯೋಗ ಕ್ಷೇತ್ರದಲ್ಲಿ ತಂತ್ರಜ್ಞಾನದ ಬಳಕೆಯು ಸಕಾರಾತ್ಮಕವಾಗಿ ಮತ್ತು ನಕಾರಾತ್ಮಕವಾಗಿ ಪ್ರಭಾವ ಬೀರುವುದನ್ನು ನಾವು ಕಾಣಬಹುದು. ಹೀಗಿದ್ದೂ ಉದ್ಯೋಗ ಕ್ಷೇತ್ರದಲ್ಲಿ ಸಾಧನೆ ಮಾಡುವ ಬಹಳಷ್ಟು ಮಂದಿ ನಮ್ಮ ಸುತ್ತಮುತ್ತಲಿರುವರು.













## ಪ್ರವೇಶ ಚಟುವಟಿಕೆ

ಈ ಕೆಳಗಿನ ಚಿತ್ರಗಳನ್ನು ಗಮನಿಸಿರಿ. ಚಿತ್ರದ ಆಧಾರದಲ್ಲಿ ಉದ್ಯೋಗ ಕ್ಷೇತ್ರದಲ್ಲಾಗುವ ಬದಲಾವಣೆಗಳ ಕುರಿತು ಚರ್ಚಿಸಿರಿ. ನಿಮ್ಮ ಅಭಿಪ್ರಾಯಗಳನ್ನು ಲಿಖಿತವಾಗಿ ಮಂಡಿಸಿರಿ.














# ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥ಪ॥

ವೇದಶಾಸ್ತ್ರ ಪಂಚಾಂಗವ ಓದಿಕೊಂಡು ಅನ್ಯರಿಗೆ
ಬೋಧನೆಯ ಮಾಡುವುದು ಹೊಟ್ಟೆಗಾಗಿ ಗೇಣುಬಟ್ಟೆಗಾಗಿ ॥1॥

ಚಂಡಭಟರಾಗಿ ನಡೆದು ಕತ್ತಿ ಢಾಲು ಕೈಲಿ ಹಿಡಿದು
ಖಂಡ ತುಂಡ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥2॥

ಅಂಗಡಿ ಮುಂಗಟ್ಟನ್ಹೂಡಿ ವ್ಯಂಗ್ಯ ಮಾತುಗಳನ್ನಾಡಿ
ಭಂಗ ಬಿದ್ದು ಗಳಿಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥3॥

ಕುಂಟೆ ತುದಿಗೆ ಕೊರಡು ಹಾಕಿ ಹೆಂಟೆ ಮಣ್ಣು ಸಮನು ಮಾಡಿ
ರೆಂಟೆ ಹೊಡೆದು ಬೆಳೆಸುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥4॥

ಬೆಲ್ಲದಂತೆ ಮಾತನಾಡಿ ಎಲ್ಲರನ್ನು ಮರುಳು ಮಾಡಿ
ಸುಳ್ಳು ಬೊಗಳಿ ತಿಂಬುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥5॥



ಕೊಟ್ಟಣವನು ಕುಟ್ಟಿಕೊಂಡು ಕಟ್ಟಿಗೆಯನು ಹೊತ್ತುಕೊಂಡು
ಕಷ್ಟ ಮಾಡಿ ಉಣ್ಣುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥6॥

ಸನ್ಯಾಸಿ ಜಂಗಮ ಜೋಗಿ ಜಟ್ಟಿ ಮೊಂಡ ಬೈರಾಗಿ
ನಾನಾ ವೇಷಗಳೆಲ್ಲ ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥7॥

ಹಳ್ಳದಲ್ಲಿ ಕುಳಿತುಕೊಂಡು ಕಲ್ಲು ದೊಣ್ಣೆ ಹಿಡಿದುಕೊಂಡು
ಕಳ್ಳತನವ ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥8॥

ಅಂದಣ ಪಲ್ಲಕ್ಕಿ ಏರಿ ಮಂದಿ ಮಾರ್ಬಲ ಕೂಡಿ
ಚಂದದಿಂದ ಮೆರೆಯುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ॥9॥

ಉನ್ನತ ಕಾಗಿನೆಲೆಯಾದಿಕೇಶವನಾ ಧ್ಯಾನವನ್ನು
ಮನಮುಟ್ಟಿ ಮಾಡುವುದು ಮುಕ್ತಿಗಾಗಿ ಆನಂದಕಾಗಿ ॥10॥

**ಕನಕದಾಸರು**







## ಕವಿ ಪರಿಚಯ



ಕನಕದಾಸರು ಹಾವೇರಿ ಜಿಲ್ಲೆಯ ಶಿಗ್ಗಾಂವಿ ತಾಲೂಕಿನ ಬಾಡ ಗ್ರಾಮದಲ್ಲಿ 1509ರಲ್ಲಿ ಜನಿಸಿದರು. ಇವರ ತಂದೆ ಬೀರಪ್ಪ ನಾಯಕ ಮತ್ತು ತಾಯಿ ಬಚ್ಚಮ್ಮ. ಇವರು 15 ಮತ್ತು 16ನೇ ಶತಮಾನಗಳಲ್ಲಿ ಜನಪ್ರಿಯವಾದ ಭಕ್ತಿ ಪಂಥದ ಮುಖ್ಯ ಹರಿದಾಸರಲ್ಲಿ ಒಬ್ಬರು. ಕನ್ನಡದ ಪ್ರಸಿದ್ಧ ಕೀರ್ತನಕಾರರು ಮತ್ತು ಪುರಂದರದಾಸರೊಂದಿಗೆ ಕರ್ನಾಟಕ ಸಂಗೀತ ಕ್ಷೇತ್ರಕ್ಕೆ ಕಾಣಿಕೆಯನ್ನಿತ್ತವರು. ಮೋಹನ ತರಂಗಿಣಿ, ನಳ ಚರಿತ್ರೆ, ರಾಮಧಾನ್ಯ ಚರಿತೆ, ಹರಿಭಕ್ತಿಸಾರ ಇವರ ಪ್ರಸಿದ್ಧ ಕಾವ್ಯಕೃತಿಗಳಾಗಿವೆ. ಕನಕದಾಸರು ಹಲವಾರು ಕೀರ್ತನೆಗಳನ್ನು ರಚಿಸಿದ್ದಾರೆ. ಈ ಕೀರ್ತನೆಯನ್ನು 'ಕನಕದಾಸರ ಕೀರ್ತನೆಗಳು ಮತ್ತು ಮುಂಡಿಗೆಗಳು' ಎಂಬ ಕೃತಿಯಿಂದ ಆರಿಸಲಾಗಿದೆ. 'ಕಾಗಿನೆಲೆಯಾದಿ ಕೇಶವ' ಎನ್ನುವುದು ಕನಕದಾಸರ ಕೀರ್ತನೆಗಳ ಅಂಕಿತ ನಾಮವಾಗಿದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ಕೈಯಲ್ಲಿ ಕತ್ತಿ ಗುರಾಣಿ ಹಿಡಿದು ಖಂಡ ತುಂಡ ಮಾಡುವವರು ಯಾರು?
2. ರೈತನು ಹೇಗೆ ಕೆಲಸ ಮಾಡುವನು?
3. ಜನರು ಯಾವ ಯಾವ ವೇಷಗಳನ್ನು ಧರಿಸಿ ಸಂಪಾದನೆ ಮಾಡುವರೆಂದು ದಾಸರು ಹೇಳಿದ್ದಾರೆ?
3. ಜನರೆಲ್ಲ ಯಾವ ಉದ್ದೇಶದಿಂದ ವಿವಿಧ ಕೆಲಸಗಳಲ್ಲಿ ತೊಡಗಿಕೊಂಡಿರುವರೆಂದು ಕನಕದಾಸರು ಹೇಳಿದ್ದಾರೆ?

## ಸಾರಾಂಶ ಬರೆಯಿರಿ

ಕನಕದಾಸರು ಬರೆದ 'ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ' ಕೀರ್ತನೆಯ ಸಾರಾಂಶವನ್ನು ಬರೆಯಿರಿ.

## ಸಾಲು ಗುರುತಿಸಿರಿ

ರೈತನ ಶ್ರಮಜೀವನವನ್ನು ಉಲ್ಲೇಖಿಸಿದ ಸಾಲುಗಳನ್ನು ಗುರುತಿಸಿ ಬರೆಯಿರಿ.

## ಸ್ವಾರಸ್ಯ ಬರೆಯಿರಿ

ಕೆಳಗಿನ ಸಾಲುಗಳ ಸ್ವಾರಸ್ಯ ಬರೆಯಿರಿ.

ಬೆಲ್ಲದಂತೆ ಮಾತನಾಡಿ ಎಲ್ಲರನ್ನು ಮರುಳು ಮಾಡಿ
ಸುಳ್ಳು ಬೊಗಳಿ ತಿಂಬುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ

## ವಿವರಣೆ ತಯಾರಿಸಿರಿ

ಎಲ್ಲಾರು ಮಾಡುವುದು ಹೊಟ್ಟೆಗಾಗಿ ಗೇಣು ಬಟ್ಟೆಗಾಗಿ ಕೀರ್ತನೆಯಲ್ಲಿ ವಿವಿಧ ಕಸುಬುಗಳಲ್ಲಿ ತೊಡಗಿರುವವರ ಕುರಿತು ಹೇಳಲಾಗಿದೆ. ಯಾವುದೇ ಕೆಲಸದಲ್ಲಿ ಮೇಲು ಕೀಳುಗಳಿಲ್ಲ. ಆದುದರಿಂದ ಕನಕದಾಸರ ಕೀರ್ತನೆಯ ಆಧಾರದಲ್ಲಿ 'ಉದ್ಯೋಗದ ಮಹತ್ವ' ಎಂಬ ವಿಷಯದ ಕುರಿತು ವಿವರಣೆ ತಯಾರಿಸಿರಿ.

## ಸರಿಪಡಿಸಿ ಬರೆಯಿರಿ

ಕೆಳಗಿನ ವಾಕ್ಯಗಳನ್ನು ಸರಿಪಡಿಸಿ ಬರೆಯಿರಿ.

ಉದಾ: ಅರಸನು ಯುದ್ಧ ಸಾರಿದನು.

ಅರಸನು ಯುದ್ಧವನ್ನು ಸಾರಿದನು.

- ಪ್ರಶಾಂತ ರಹೀಮನು ಆಟಕ್ಕೆ ಕರೆದನು.

  ..........................................................

- ಮೇರಿಯ ಕೈ ಪುಸ್ತಕವನ್ನು ಎತ್ತಿದಳು.

  ..........................................................

- ರಮೇಶನು ಶಾಲೆ ಹೋದನು.

  ..........................................................

- ಸುಮಾ ಅಂಗಡಿ ಬಟ್ಟೆ ತಂದಳು.

  ..........................................................

- ರಾಣಿ ಮನೆಗೆ ಗೆಳತಿಯರು ಬಂದರು.

  ..........................................................

- ಮರ ಹಕ್ಕಿ ಗೂಡು ಕಟ್ಟಿದೆ.

  ..........................................................

## ಸಂಗ್ರಹಿಸಿರಿ

ಕನಕದಾಸರು ರಚಿಸಿದ ಕೀರ್ತನೆಗಳನ್ನು ಸಂಗ್ರಹಿಸಿ ತರಗತಿಯಲ್ಲಿ □□□ ಸಹಾಯದಿಂದ ಹಾಡಿರಿ.

# ಮಗ್ಗದ ಸಾಹೇಬ

ಮಗ್ಗದ ಸಾಹೇಬ ಅಂದರೆ ಅಬ್ದುಲ್ ರಹೀಮ್ ಸಾಹೇಬ್. ಅವನು ಮಗ್ಗವನ್ನು ಮುಟ್ಟದೆ ಇಪ್ಪತ್ತು ವರ್ಷಕ್ಕೂ ಹೆಚ್ಚಾಗಿದೆ. ಆದರೂ ಅವನನ್ನು ಮಗ್ಗದ ಸಾಹೇಬನೆಂದೇ ಕರೆಯುವುದು ವಾಡಿಕೆ. ಅವನ ಪೂರ್ವಜರು ಸಾಹೇಬ್ ಬಹಾದ್ದೂರ್. ಮಗ್ಗದ ಹುಸೇನ್ ಸಾಹೇಬರು ಜನಪ್ರಿಯ ಮತ್ತು ಧನವಂತ ವ್ಯಕ್ತಿಯಾಗಿದ್ದರು. ಅವರು ಮಸೀದಿ ಮಾತ್ರವಲ್ಲ; ದೇವಸ್ಥಾನವನ್ನೂ ಕಟ್ಟಿಸಿದ್ದರು. ಇಂದಿಗೂ ಈ ದೇವಸ್ಥಾನದಲ್ಲಿ ರಥೋತ್ಸವದ ಸಮಯದಲ್ಲಿ ಅವರ ಮನೆತನದ ಹಿರಿಯ ಪ್ರತಿನಿಧಿಗೆ ಎಲ್ಲರಿಗಿಂತಲೂ ಮುಂದಾಗಿ ಪ್ರಸಾದವನ್ನು ಪಡೆಯುವ ಹಕ್ಕಿದೆ.

ಇಂತಹ ಸಂಪ್ರದಾಯ ಪದ್ಧತಿಗಳು ಇಂದಿಗೂ ಕರ್ನಾಟಕದಲ್ಲಿ ನಡೆಯುತ್ತಿವೆ. ಇದರಿಂದ ಪೂರ್ವಜರಲ್ಲಿ ಎಂತಹ ಘನತೆ, ಸದಾಚಾರ, ಸದ್ಭಾವನೆಗಳು ಇದ್ದವು ಎಂದು ತಿಳಿಯುವುದು. ಉದಾಹರಣೆಗೆ ನನ್ನದೇ ಹುಟ್ಟೂರಿನ ಪಕ್ಕದಲ್ಲಿ ಮುಸಲ್ಮಾನರ ವಸತಿ ಇದೆ. ಅದರೊಳಗೆ ಒಂದು ಪವಿತ್ರ ಸ್ಥಾನವಿದೆ. ಅಲ್ಲಿ 'ಉರ್ಸ್' ಎಂಬ ಮುಸಲ್ಮಾನರ ಧಾರ್ಮಿಕ ಉತ್ಸವದ ಕಾಲದಲ್ಲಿ ನಮ್ಮ ಮನೆತನದ ಒಬ್ಬ ಪ್ರತಿನಿಧಿ ಇದ್ದೇ ಇರಬೇಕೆಂಬ ಸಂಪ್ರದಾಯ ಇತ್ತು.



ಹಾಗೆಯೇ ಗಣೇಶಚತುರ್ಥಿ, ಕೃಷ್ಣಾಷ್ಟಮಿಗಳ ಮರುದಿನ ಮುಸಲ್ಮಾನ ಸಮಾಜದ ಪ್ರತಿಷ್ಠಿತ ಮುಖ್ಯಸ್ಥರು ನಮ್ಮಮನೆಗೆ ಬರುವುದು, ಕುಶಲೋಪಚಾರ ಮಾತನಾಡುವುದು, ನಾವು ಅವರಿಗೆ ಮೋದಕ, ಉಂಡೆ, ಚಕ್ಕುಲಿ ಇತ್ಯಾದಿ ಹಬ್ಬದ ಭಕ್ಷ್ಯ-ಭೋಜ್ಯಗಳನ್ನು ವಿತರಣೆ ಮಾಡುವ ಸಂಪ್ರದಾಯವಿತ್ತು. ಒಂದು ಬಾರಿ ನಮ್ಮ ತಾಯಿ ಕಾಯಿಲೆ ಬಿದ್ದ ಕಾರಣ ತಂದೆಯವರು ಅಂಗಡಿಯಿಂದ ಲಡ್ಡುಗಳನ್ನು ಕೊಂಡು ಕೊಟ್ಟುದಕ್ಕೆ ಅವರಿಗೆ ಬಹಳ ಸಿಟ್ಟು ಬಂತು. 'ರಾಯರೆ, ಅಂಗಡಿಯಿಂದ ತೆಗೆದುಕೊಳ್ಳಲು ನಮ್ಮಲ್ಲಿ ಹಣವಿಲ್ಲವೆ? ಮನೆಯಲ್ಲಿ ಕಾಯಿಲೆಯಿದ್ದರೆ ಒಂದು ತುಂಡು ಬೆಲ್ಲವನ್ನೋ ಕಲ್ಲುಸಕ್ಕರೆ ಹರಳನ್ನೋ ಕೊಡಿ. ನಿಮ್ಮ ಹಬ್ಬದ ಪೂಜೆಯ ಪ್ರಸಾದವನ್ನು ನಾವು ತೆಗೆದುಕೊಳ್ಳುವುದು ತಲತಲಾಂತರದಿಂದ ಬಂದ ಹಳೆಯ ಸಂಪ್ರದಾಯ. ಅಂಗಡಿಯ ಮಿಠಾಯಿಯನ್ನು ಪ್ರಸಾದವೆಂದು ಕೊಡುವುದು ಸರಿಯೇ?' ಎಂದು ಕೇಳಿಯೇ ಬಿಟ್ಟಿದ್ದರು.

ಅದು ಹೇಗೇ ಇರಲಿ. ಈಗ ಅಬ್ದುಲ್ ರಹೀಮನಿಗೆ 'ಮಗ್ಗದ ಸಾಹೇಬ' ಎಂದು ಹೇಳಿದರೆ ಬಹು ಸಿಟ್ಟು ಬರುತ್ತಿತ್ತು. "ಅನಿಷ್ಟ ಮಗ್ಗದ ಹೆಸರೆತ್ತಬೇಡಿ"-"ಮಗ್ಗವಲ್ಲ ಕೊರಳಿಗೆ ಹಗ್ಗ!" ಎಂಬುದು ಆತನ ನಿರಾಶೆ, ರೋಷಗಳ ಉದ್ಗಾರವಾಗಿತ್ತು.

ಏಕೆಂದರೆ ಅವನ ಅಜ್ಜನ ಕಾಲದಲ್ಲಿ ಬ್ರಿಟಿಷರು ಅಗ್ಗದ ವಿಲಾಯತಿ ಮಿಲ್ಲಿನ ಬಟ್ಟೆಗಳನ್ನು ನಮ್ಮದೇಶದಲ್ಲಿ ಹೇರಿಬಿಟ್ಟರು. ಅವೇನೋ ನಿಜಕ್ಕೂ ನಿಕೃಷ್ಟ ವಸ್ತುಗಳು, ಒಂದು ವರ್ಷದೊಳಗೇ ಕಳೇಬರಗಳಾಗಿ ಹರಕು ಚಿಂದಿಯಾಗುವುವು. ಬಣ್ಣವೋ ಒಂದೇ ತಿಂಗಳಲ್ಲಿ ವಿವರ್ಣವಾಗಿ ಎರಡೇ ತಿಂಗಳಲ್ಲಿ ಮಾಯವಾಗುವುದು. ಆದರೇನು? ಬಹು ಅಗ್ಗ. ಜನರಿಗೆ ಬೇಕಾದುದು ಅಗ್ಗದ ವಸ್ತು. ಗುಣವನ್ನು ಯಾರು ಕೇಳುತ್ತಾರೆ? ಅಗ್ಗದ ಮಾಲಿನದೇ ಆಧಿಪತ್ಯವಾಯಿತು. ಮಗ್ಗದವರು ಭಿಕಾರಿಗಳಾದರು. ಅವರ ಅನ್ನಕ್ಕೆ ಸಂಚಕಾರವಾಯಿತು.

ಪಾಪ! ಅಬ್ದುಲ್ ರಹೀಮನ ಗತಿ? ಹಿರಿಯರು ಕಟ್ಟಿದ ಭವ್ಯವಾದ ಹಳೆಯ ಕಾಲದ ಮನೆ. ವಿಶಾಲವಾದ ತೋಟ. ಆದರೆ ಮಗ್ಗಗಳೆಲ್ಲಾ ಧೂಳು ತುಂಬಿ ಜೇಡನ ಬಲೆಗಳಿಂದ ಆಚ್ಛಾದಿತವಾಗಿವೆ. ಮನೆಯಲ್ಲಿ ಊಟಕ್ಕೆ ಇದೆಯೋ ಇಲ್ಲವೋ ಎಂಬಂತಾಗಿದೆ.

ಈಗ ಅವನಿಗೆ ಒಂದೇ ಹಠ, ಒಂದೇ ವ್ರತ. ಅವನ ಮೂವರು ಗಂಡುಮಕ್ಕಳಿಗೆ ಒಂದಿಷ್ಟಾದರೂ ವಿದ್ಯಾಭ್ಯಾಸ ಕೊಡಿಸಿ ಸರಕಾರಿ ನೌಕರರನ್ನಾಗಿ ಮಾಡಬೇಕು ಎಂದು. ಅಂತೆಯೇ ಇಬ್ಬರು ಮಕ್ಕಳು ವಿಧೇಯರಾಗಿ ಅವನ ಅಭೀಷ್ಟವನ್ನು ನೆರವೇರಿಸಿದರು. ಒಬ್ಬ ಸರಕಾರಿ ಕಚೇರಿಯಲ್ಲಿ ಗುಮಾಸ್ತನಾದ. ಇನ್ನೊಬ್ಬ ಪೋಸ್ಟ್ ಮಾಸ್ತರನಾದ. ಆದರೆ ಕೊನೆಯ ಮಗ ಕರೀಮನಿಂದ ಬಹಳ ನಿರಾಸೆ ಉಂಟಾಯಿತು. ಕರೀಮ್ ಆಟದಲ್ಲೂ ಪಾಠದಲ್ಲೂ ಬಹು ಚುರುಕು; ಬುದ್ಧಿವಂತ; ಹಸನ್ಮುಖಿ ಎಲ್ಲರಿಗೂ ಬೇಕಾದವನು. ಆದರೆ ಏನೋ ಕಾರಣದಿಂದ

ಅವನಿಗೆ ಅನಿಷ್ಟ ಮಗ್ಗದಲ್ಲಿ ಬಹಳ ಅಭಿರುಚಿ, ಮನೆಯಲ್ಲಾದರೋ ಮಗ್ಗವನ್ನು ಮುಟ್ಟಲೂ ತಂದೆ ಬಿಡುತ್ತಿರಲ್ಲಿಲ್ಲ. ಆದರೆ ಮಗನ ಗ್ರಹಚಾರ ಎನ್ನಿ. ಶಾಲೆಯಲ್ಲಿಯೇ ಮಗ್ಗ ಉದ್ಭವಿಸಬೇಕೇ?

ಮಹಾತ್ಮಾ ಗಾಂಧಿ ಪ್ರೇರಣೆಯಿಂದ ಕೆಲವು ಶಾಲೆಗಳಲ್ಲಿ 'ನವೀನ ಶಿಕ್ಷಣ' ಆರಂಭವಾಯಿತು. ಈ ವ್ಯವಸ್ಥೆಯಲ್ಲಿ ವಿದ್ಯಾರ್ಥಿಗಳಿಗೆ ಹಲವು ತರಹದ ಔದ್ಯೋಗಿಕ ಶಿಕ್ಷಣವನ್ನು ಕೊಡುವುದು, ಅವರಲ್ಲಿ ಹಸ್ತಕೌಶಲವನ್ನು, ದೇಹಶ್ರಮದಲ್ಲಿ ಗೌರವ-ಭಾವವನ್ನು ಉಂಟು ಮಾಡುವುದು ಒಂದು ಭಾಗವಾಗಿತ್ತು. ಕೆಲವರಿಗೆ ಬಡಗಿಯ ಕೆಲಸ. ಕೆಲವರಿಗೆ ಬೆತ್ತದ ಕುರ್ಚಿ ಕೆಲಸ ಇತ್ಯಾದಿ ಸಾಮಗ್ರಿಗಳನ್ನು ಮಾಡುವ, ಕೆಲವರಿಗೆ ಕೃಷಿ, ಕೆಲವರಿಗೆ ಮಗ್ಗದ ಕೆಲಸವನ್ನು ಕಲಿಸತೊಡಗಿದ್ದರು.

ಹುಡುಗ ಕರೀಮ್ ಮಗ್ಗದ ಕೆಲಸವನ್ನು ಮೀನು ನೀರಿನಲ್ಲಿ ಈಜುವಷ್ಟೇ ಸುಲಭವಾಗಿ ಕಲಿತು ಬಹು ನಿಪುಣನಾಗಿಬಿಟ್ಟ. ಅವನ ತಂದೆಗೆ ರೋಷ ಉಕ್ಕಿಬಂತು. ಮುಖ್ಯೋಪಾಧ್ಯಾಯ ಶಂಕರಪ್ಪ ಅವರೊಡನೆ ನಿಷ್ಠುರವಾಗಿ ಜಗಳವಾಡಿದ್ದನು. ಆದರೆ ಹುಡುಗ ಕರೀಮ್ ಶಾಲೆಯ ಮಗ್ಗದಲ್ಲಿ ಒಂದು ಪರಿವರ್ತನೆಯನ್ನು ತನ್ನದೇ ಬುದ್ಧಿವಂತಿಕೆ ಹಾಗೂ ಕೌಶಲದಿಂದ ಮಾಡಿಬಿಟ್ಟಿದ್ದ. ಅದನ್ನು ಶಂಕರಪ್ಪ ಅವರು ಸ್ವಾಭಾವಿಕವಾಗಿಯೇ ಪ್ರಶಂಸೆ ಮಾಡಿ ಮೇಲಧಿಕಾರಿಗಳಿಗೆ ವರದಿ ಮಾಡಿದ್ದರು. ಅದರ ಫಲಸ್ವರೂಪವಾಗಿ ಸರಕಾರದಿಂದ ಹುಡುಗ ಕರೀಮನಿಗೆ ಒಂದು ಬೆಳ್ಳಿಯ ಪದಕವೂ ಒಂದು ನೂರು ರೂಪಾಯಿಯ ಬಹುಮಾನವೂ ಬಂದುಬಿಟ್ಟವು.

ಹುಡುಗನ ಉತ್ಸಾಹ ಆಕಾಶಕ್ಕೇರಿತು. ತಂದೆ ಈ ಹಠಮಾರಿಗೆ ಮಗ್ಗದ ಹುಚ್ಚನ್ನು ಬಿಡಿಸಬೇಕೆಂದು ಶಾಲೆಯಿಂದಲೇ ಬಿಡಿಸಿಬಿಟ್ಟನು. ಹೆಡ್ಮಾಸ್ಟರ್ ಶಂಕರಪ್ಪ ಅವರ ಎಷ್ಟೋ ಅನುನಯ ವಿನಯಗಳನ್ನು ಗಣಿಸದೆ ನಿರಾಕರಿಸಿದನು.

ಒಂದು ದಿನ ಶಾಲೆಯ ವಾರ್ಷಿಕೋತ್ಸವ ಸಮಾರೋಪದಲ್ಲಿ ಹಳೆಯ ವಿದ್ಯಾರ್ಥಿಗಳ ಒಂದು ನಾಟಕವಿತ್ತು. ಅದರಲ್ಲಿ ಕರೀಮನದು ಸ್ತ್ರೀಪಾತ್ರ. ಅದಕ್ಕೆಂದು ತಾಯಿಯಿಂದ ಗೌಪ್ಯವಾಗಿ ಹಳೆಕಾಲದ ಚಿನ್ನದ ಸರವನ್ನು ಅಲಂಕಾರಕ್ಕೆಂದು ಎರವಲು ತೆಗೆದುಕೊಂಡ. ನಾಟಕ ಮುಗಿದ ನಂತರ ಮನೆಗೆ ಬರಲಿಲ್ಲ. ಎಲ್ಲೋ ಮಾಯವಾಗಿ ಹೋದ.

ತಂದೆಗೆ ಮೈಯಲ್ಲಿ ಅಗ್ನಿಸಂಚಾರವಾಯಿತು. ಮಗನನ್ನು ಕ್ರೂರವಾಗಿ ಶಪಿಸಿದನು. "ಹಾಳಾಗಿ ಹೋಗಲಿ! ಹಠಮಾರಿ. ತಂದೆಯ ಮಾತನ್ನು ಉಲ್ಲಂಘಿಸಿದವನು ಎಂದು ಮಾತ್ರ ತಿಳಿದಿದ್ದೆ. ಈಗ ಕಳ್ಳನೆಂದೂ ತಿಳಿಯಿತು. ನನಗೆ ಇಬ್ಬರೇ ಗಂಡು ಮಕ್ಕಳು : ಕಳ್ಳನಾದವನು, ಮನೆಬಿಟ್ಟು ಓಡಿಹೋದವನು ಮಗನೇ ಅಲ್ಲ" ಎಂದು ಆಣೆ ಹಾಕಿದನು.

ಕೆಲವು ವರ್ಷಗಳ ಅನಂತರ ಕರೀಮ್ - ಈಗ ಬೆಳೆದು ಯುವಕನಾಗಿದ್ದಾನೆ - ಮನೆಗೆ ಬಂದು ಬಾಗಿಲು ತಟ್ಟಿದ. ತಂದೆ ಬಾಗಿಲು ತೆರೆದು ಮುಖ ನೋಡಿ ಫಟಾರನೆ ಬಾಗಿಲು ಮುಚ್ಚಿದ. ಒಂದು ಘಂಟೆ ಬಾಗಿಲು ತಟ್ಟಿದರೂ ತಾಯಿ ಅತ್ತು ಹಂಬಲಿಸಿದರೂ ಬಾಗಿಲು ತೆರೆಯಲೇ ಇಲ್ಲ.

ಕೊನೆಗೆ ನಿವೃತ್ತರಾಗಿರುವ ಶಂಕರಪ್ಪ ಅವರ ಮನೆಗೆ ಹೋಗಿ, ಸಂಧಾನ ಮಾಡಿಸಿರಿ ಎಂದು ನಿವೇದಿಸಿದ. 'ನನ್ನ ಮುಖವನ್ನೇ ನೋಡಬಾರದು ಎಂದು ಹಠವಿದ್ದರೆ ಕೊನೆಗೆ ತಾಯಿಯಾದರೂ ನನ್ನನ್ನು ಕಾಣಬಾರದೆ? ಅಮ್ಮನ ಚಿನ್ನದ ಸರವನ್ನು ತಂದಿದ್ದೇನೆ. ಅದರೊಡನೆ ಹತ್ತುಸಾವಿರ ರೂಪಾಯಿಗಳನ್ನು ತಂದಿದ್ದೇನೆ. ಅವನ್ನಾದರೂ ತಾಯಿಯ ಕಾಲ ಮೇಲೆ ಹಾಕಿ ಹೋಗುತ್ತೇನೆ. ತಂದೆಯವರಿಗೆ ಸಮಾಧಾನ ಹೇಳಿ. ನಿಮ್ಮ ಹಳೆಯ ಶಿಷ್ಯನಿಗೆ ಇದೊಂದು ಉಪಕಾರ ಮಾಡಿ' ಎಂದ.

ಶಂಕರಪ್ಪ ಅವರು ಮುದುಕನೊಡನೆ ಒಂದು ಗಂಟೆ ಗೋಗರೆದರು, ನಿವೇದಿಸಿದರು, ತರ್ಕಿಸಿದರು ಮತ್ತು ಚರ್ಚಿಸಿದರು. ಆದರೆ ನಿಷ್ಫಲವಾಯಿತು. ಒಂದು ಪದವನ್ನೂ ಕೇಳುವ ತಾಳ್ಮೆ ಮುದುಕನಿಗೆ ಇರಲಿಲ್ಲ. 'ಸಾಹೇಬ್ ಬಹಾದ್ದೂರ್ ಹುಸೇನ್ ಸಾಹೇಬರ ಕೀರ್ತಿಗೆ ಮಸಿಹಚ್ಚಿದ್ದಾನೆ. ಈ ಮಾತಿನಲ್ಲಿ ನೀವು ಅಡ್ಡಬಾಯಿ ಹಾಕಬೇಡಿ. ನೀವು ಕಲಿಸಿದ ಪಾಠದಿಂದಲೇ ಈ ಹಠಮಾರಿ ನಮ್ಮ ವಂಶದ ಕೀರ್ತಿಯನ್ನು ಮಣ್ಣುಪಾಲು ಮಾಡಿದ. ಹಣ ತಂದಿದ್ದಾನಂತೆ. ಕಳವಿನ ಹಣವೋ? ದರೋಡೆಯ ಹಣವೋ?' ಎಂದು ಸಿಡುಕಿದ. ಶಂಕರಪ್ಪ ಅವರು ಮುಖಬಾಡಿಸಿಕೊಂಡು ಹಿಂತೆರಳಿದರು.

ಕರೀಮನ ಹಣ ಕಳವಿನದೂ ಅಲ್ಲ. ದರೋಡೆಯದೂ ಅಲ್ಲ. ಸಣ್ಣಪ್ರಾಯದಲ್ಲೇ ಮಗ್ಗದ ಸಹಕಾರಿ ಸಂಘವೊಂದನ್ನು ಸ್ಥಾಪಿಸಿ ಅವನೀಗ ಅದರ ಅಧ್ಯಕ್ಷನಾಗಿದ್ದಾನೆ. ಸಾಕಷ್ಟು ಯಶಸ್ವಿಯೂ ಧನವಂತನೂ ಆಗಿದ್ದಾನೆ. ಅದೂ ಅಲ್ಲದೆ ಮಗ್ಗದ ಯಂತ್ರದ ಪ್ರಯೋಗದಲ್ಲಿ ಹೊಸ ಹೊಸ ಸುಧಾರಣೆಗಳನ್ನೂ ಪರಿವರ್ತನೆಗಳನ್ನೂ ತಂದು ಹೆಸರು ಮಾಡಿದ್ದಾನೆ. ಆದರೆ ಈ ವಿಷಯದ ಲವಲೇಶವೂ ತಂದೆಗೆ ತಿಳಿಯದು. ಏಕೆಂದರೆ ಆತ ಕರೀಮನ ಕಡೆಗೆ ತನ್ನ ಹೃದಯವನ್ನು, ಮನೆಯ ಬಾಗಿಲು ಮುಚ್ಚಿದಂತೆ ಸಂಪೂರ್ಣವಾಗಿ ಮುಚ್ಚಿಬಿಟ್ಟಿದ್ದಾನೆ. ಯಾರಾದರೂ ಕರೀಮನ ಹೆಸರೆತ್ತಿದರೆ 'ನನಗೆ ಎರಡೇ ಮಕ್ಕಳು, ಕಳ್ಳರ ಪರಿಚಯ ನನಗಿಲ್ಲ' ಎಂದೇ ಅವನ ನಿಷ್ಠುರದ ಉತ್ತರ.

ಕೆಲವು ವರ್ಷಗಳ ಅನಂತರ ಅಬ್ದುಲ್ ರಹೀಮ್ ಹಾಸಿಗೆಯಲ್ಲಿ ಒರಗಿದ್ದಾನೆ. ಅನಾರೋಗ್ಯದಿಂದ ನರಳುತ್ತಾ ಇದ್ದಾನೆ. ಎಲುಬಿನ ಹಂದರವಾಗಿದ್ದಾನೆ. ಕಣ್ಣೂ ಸರಿಯಾಗಿ

ಕಾಣಿಸುತ್ತಿಲ್ಲ; ಕಿವಿಯೂ ಸರಿಯಾಗಿ ಕೇಳುತ್ತಿಲ್ಲ. ಶಂಕರಪ್ಪ ಅವರು ಬಾಗಿಲು ತಟ್ಟಿದರು. ಒಳಗೆ ಬಂದರು. ಕೈಯಲ್ಲಿ ಒಂದು ವಾರ್ತಾಪತ್ರಿಕೆ. 'ರಹೀಮ್ ಸಾಹೇಬರೇ. ಈ ಪತ್ರಿಕೆ ನೋಡಿದಿರಾ? ಈ ಭಾವಚಿತ್ರ ನೋಡಿ?' ಮುದುಕನ ಕಣ್ಣಿನ ಹತ್ತಿರ ತಂದರು. ಆದರೆ ಪಾಪ! ಕಣ್ಣು ಮಂಜಾಗಿವೆ. ಏನೂ ತೋರದು. ಅವನ ಹೆಂಡತಿ ಬಂದು ವಾರ್ತಾಪತ್ರಿಕೆ ತೆಗೆದುಕೊಂಡು ಹೋದಳು.

"ಕರೀಮ್! ನಮ್ಮ ಕರೀಮ್! ನಮ್ಮ ಕರೀಮ್" ಎಂದು ಗಟ್ಟಿಯಾಗಿ ಉದ್ಗರಿಸಿದಳು.

"ಏನು? ಜೇಲಿಗೆ ಹೋದನೇ? ಫಾಶೀ ಆಯಿತೇ? ಇನ್ನೂ ಮನೆತನದ ಮೇಲೆ ಏನು ಅಪಕೀರ್ತಿ ಹೇರಿದ್ದಾನೆ?" ಎಂದು ಮುದುಕ ಕೆಮ್ಮುತ್ತ ಕೆಮ್ಮುತ್ತ ಗರ್ಜಿಸಿದ.

"ರಹೀಮ್ ಸಾಹೇಬರೇ, ನಿಮ್ಮ ಮಗ ಕರೀಮನಿಗೆ ರಾಷ್ಟ್ರಪತಿ ಅವರು ಪದ್ಮಭೂಷಣ ಬಿರುದನ್ನು ಕೊಟ್ಟಿದ್ದಾರೆ. ಅದರ ಭಾವಚಿತ್ರ ಈ ವಾರ್ತಾಪತ್ರಿಕೆಯಲ್ಲಿದೆ."

"ಆಂ! ಪದ್ಮಭೂಷಣ! ಅಂದರೇನು?"

"ಪದ್ಮಭೂಷಣ ಅಂದರೆ ಸಾಹೇಬ್ ಬಹಾದ್ದೂರ್‌ಗಿಂತಲೂ ಮೇಲಿನ ಬಿರುದು. ಖಾನ್ ಸಾಹೇಬ್, ಖಾನ್ ಬಹಾದ್ದೂರ್, ದಿವಾನ್ ಬಹಾದ್ದೂರ್ ಇವೆಲ್ಲದರಿಂದಲೂ ಮೇಲೆ, ದೊಡ್ಡ ಬಿರುದು!"



"ಕರೀಮ್! ನನ್ನ ಕರೀಮ್! ಸಾಹೇಬ್ ಬಹಾದ್ದೂರ್‌ಗಿಂತಲೂ ಮೇಲಾದನೇ? ದೇವರು ದೊಡ್ಡವನು. ದೇವರು ದಯಾಳು. ನನ್ನ ಬಾಯಿಯಿಂದ ಬಿದ್ದ ಕೆಟ್ಟ ಮಾತನ್ನು ದೇವರು ಕಿವಿಗೆ ಹಾಕಿಕೊಳ್ಳಲಿಲ್ಲ. ನನ್ನ ಕರೀಮ್ ಮಗ್ಗದ ಹುಸೇನ್ ಸಾಹೇಬರ ಹೆಸರಿಗೆ ಕೀರ್ತಿ ತಂದ" ಎಂದು ಕೆಮ್ಮುತ್ತ ಕೆಮ್ಮುತ್ತ ಭಾವುಕನಾಗಿ ಬಿಕ್ಕಿಬಿಕ್ಕಿ ಅಳತೊಡಗಿದ.

**ಬಾಗಲೋಡಿ ದೇವರಾಯ**

## ಲೇಖಕರ ಪರಿಚಯ



ಬಾಗಲೋಡಿ ದೇವರಾಯ ಅವರು ಮಂಗಳೂರಿನ ಕಿನ್ನಿಕಂಬಳ ಗ್ರಾಮದವರು. ಪ್ರಾಥಮಿಕ ಶಿಕ್ಷಣವನ್ನು ಅಲ್ಲೇ ಮುಗಿಸಿದ ಅವರು ಅನಂತರ ಮಂಗಳೂರಿನ ಸಂತ ಅಲೋಶಿಯಸ್ ಕಾಲೇಜಿನಲ್ಲಿ ಇಂಟರ್ ಮೀಡಿಯೇಟ್ ಶಿಕ್ಷಣವನ್ನು ಪಡೆದರು. ಬಳಿಕ ಮದರಾಸಿನ ಕ್ರಿಶ್ಚನ್ ಕಾಲೇಜಿನಲ್ಲಿ ಇಂಗ್ಲಿಷ್ ಸಾಹಿತ್ಯದಲ್ಲಿ ಬಿ.ಎ. ಮುಗಿಸಿದರು. ಅನಂತರ ಇಂಗ್ಲಿಷ್ ಪ್ರಾಧ್ಯಾಪಕರಾಗಿ ಕೆಲವು ಕಾಲ ಸೇವೆ ಸಲ್ಲಿಸಿದರು. ಆ ಕಾಲಕ್ಕೆ ಐ.ಎ.ಎಸ್ ಪರೀಕ್ಷೆಯಲ್ಲಿ ತೇರ್ಗಡೆ ಹೊಂದಿ ವಿದೇಶಿ ಸೇವೆಗೆ ಆಯ್ಕೆಯಾದರು. ಇಟಲಿ, ನೇಪಾಳ, ನೈಜೀರಿಯಾ, ಫಿಲಿಫೈನ್ಸ್, ನ್ಯೂಜಿಲೇಂಡ್, ಬಲ್ಗೇರಿಯಾ ಮೊದಲಾದ ದೇಶಗಳಲ್ಲಿ ರಾಯಭಾರಿಯಾಗಿ ಸೇವೆ ಸಲ್ಲಿಸಿದ್ದರು. ಮಾಸ್ತಿ ಹಾಗೂ ಇವರು ಸಮಕಾಲೀನರು. ಹುಚ್ಚು ಮುನಸೀಫ ಮತ್ತು ಇತರ ಕಥೆಗಳು, ಆರಾಧನಾ, ರುದ್ರಪ್ಪನ ರೌದ್ರ ಇವರ ಕಥಾ ಸಂಕಲನಗಳಾಗಿವೆ.

## ಚಟುವಟಿಕೆಗಳು

### ಉತ್ತರಿಸಿರಿ

1. ಅಬ್ದುಲ್ ರಹೀಮನ ಹಠವೇನು?
2. ತಂದೆಯ ಆಸೆಯನ್ನು ಮೊದಲೆರಡು ಮಕ್ಕಳು ಹೇಗೆ ನೆರವೇರಿಸಿದರು?
3. ಕರೀಮನ ಅಭಿರುಚಿ ಯಾವುದರಲ್ಲಾಗಿತ್ತು?
4. ಅಬ್ದುಲ್ ರಹೀಮ್ ಮಗನನ್ನು ಶಾಲೆಯಿಂದ ಬಿಡಿಸಿದ್ದೇಕೆ?
5. ಅಬ್ದುಲ್ ರಹೀಮ್ ಮಗನಾದ ಕರೀಮನನ್ನು ಶಪಿಸಲು ಕಾರಣವೇನು?

## ಸಂದರ್ಶನ ಪ್ರಶ್ನಾವಳಿ

ಮಗ್ಗದ ಸಾಹೇಬರಂತೆ ನಿಮ್ಮ ಊರಿನಲ್ಲೂ ಯಾವುದಾದರೂ ಒಂದು ಕ್ಷೇತ್ರಗಳಲ್ಲಿ ಸಾಧನೆ ಮಾಡಿ ಹೆಸರುವಾಸಿಯಾದ ವ್ಯಕ್ತಿಯನ್ನು ಕಾಣಬಹುದು. ಅವರನ್ನು ಸಂದರ್ಶನ ಮಾಡುವುದಕ್ಕಿರುವ ಸಂದರ್ಶನ ಪ್ರಶ್ನಾವಳಿಯನ್ನು ತಯಾರಿಸಿರಿ.

## ಅಭಿನಂದನ ಪತ್ರ

ತಂದೆಯ ಆಸೆಯಂತೆ ಸರಕಾರಿ ಉದ್ಯೋಗವನ್ನೇ ಅವಲಂಬಿಸದೆ ಸ್ವಯಂ ಉದ್ಯೋಗದಲ್ಲಿ ಬೆಳೆದು ರಾಷ್ಟ್ರಮಟ್ಟದಲ್ಲಿ ಗೌರವಾದರಗಳಿಗೆ ಪಾತ್ರನಾದ ಕರೀಮನನ್ನು ನಿಮ್ಮ ಶಾಲಾ ವಾರ್ಷಿಕೋತ್ಸವದಲ್ಲಿ ಅಭಿನಂದಿಸಲಿದ್ದೀರಿ ಎಂದು ಭಾವಿಸಿ ಅಭಿನಂದನಾ ಪತ್ರ ಒಂದನ್ನು ತಯಾರಿಸಿರಿ.

## ಕಿರುಲೇಖನ ಬರೆಯಿರಿ

ಮಗ್ಗಗಳೆಲ್ಲಾ ಧೂಳು ತುಂಬಿ ಜೇಡನ ಬಲೆಗಳಿಂದ ಅಚ್ಛಾದಿತವಾಗಿವೆ. ಮನೆಯಲ್ಲಿ ಊಟಕ್ಕೆ ಇದೆಯೋ ಇಲ್ಲವೋ ಎಂಬಂತಾಗಿದೆ. ಮೂವರು ಗಂಡು ಮಕ್ಕಳಿಗೆ ಸರಕಾರಿ ಕೆಲಸ ಕೊಡಿಸುವುದು ಸಾಹೇಬರ ಗುರಿಯಾಗಿತ್ತು.

- ಈ ಮೇಲಿನ ವಿಚಾರಗಳ ಹಿನ್ನೆಲೆಯಲ್ಲಿ ಗ್ರಾಮೀಣ ಕೌಶಲ್ಯಾಧಾರಿತ ಕಸುಬುಗಳ ಮಹತ್ವದ ಕುರಿತು ಒಂದು ಕಿರುಲೇಖನ ಬರೆಯಿರಿ.

## ಟಿಪ್ಪಣಿ ಬರೆಯಿರಿ

ಯಾವುದೇ ಉದ್ಯೋಗ ಕ್ಷೇತ್ರದಲ್ಲಿದ್ದರೂ ಸಾಧನೆ ಮಾಡಬಹುದು ಎಂದು ಕರೀಮನಿಂದ ತಿಳಿಯಿತಲ್ಲವೇ? ಈ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಟಿಪ್ಪಣಿ ರೂಪದಲ್ಲಿ ಬರೆಯಿರಿ.

## ಸಂಯುಕ್ತ ವಾಕ್ಯ ರಚಿಸಿರಿ

ಕೆಳಗಿನ ವಾಕ್ಯಗಳನ್ನು ಮಾದರಿಯಂತೆ ಸಂಯುಕ್ತ ವಾಕ್ಯಗಳಾಗಿ ಬರೆಯಿರಿ.

ಮಾದರಿ : ಒಬ್ಬ ಸರಕಾರಿ ಕಛೇರಿಯಲ್ಲಿ ಗುಮಾಸ್ತನಾದ. ಇನ್ನೊಬ್ಬ ಪೋಸ್ಟ್ ಮಾಸ್ತರಾದನು.

ಒಬ್ಬ ಸರಕಾರಿ ಕಛೇರಿಯಲ್ಲಿ ಗುಮಾಸ್ತನಾದರೆ ಇನ್ನೊಬ್ಬ ಪೋಸ್ಟ್ ಮಾಸ್ತರಾದನು.

- ಮಗ್ಗದವರು ಭಿಕಾರಿಗಳಾದರು. ಅವರ ಅನ್ನಕ್ಕೆ ಸಂಚಕಾರವಾಯಿತು.
- ತಂದೆಗೆ ಮೈಯಲ್ಲಿ ಅಗ್ನಿ ಸಂಚಾರವಾಯಿತು. ಮಗನನ್ನು ಕ್ರೂರವಾಗಿ ಶಪಿಸಿದನು.

## ಸರಿಪಡಿಸಿ ಬರೆಯಿರಿ

ಕೆಳಗಿನ ಪದಗಳನ್ನು ಸೂಕ್ತವಾಗಿ ಕ್ರಮೀಕರಿಸಿ ಅರ್ಥಪೂರ್ಣ ವಾಕ್ಯವಾಗಿ ಬರೆಯಿರಿ.

- ಕ್ರೂರವಾಗಿ / ಶಪಿಸಿದನು / ಮಗನನ್ನು
- ಶಿಷ್ಯನಿಗೆ / ಮಾಡಿ / ಇದೊಂದು / ನಿಮ್ಮ / ಉಪಕಾರ / ಹಳೆಯ
- ಸಾಕಷ್ಟು / ಕರೀಮ್ / ಧನವಂತನೂ / ಆಗಿದ್ದಾನೆ / ಯಶಸ್ವಿಯೂ

# ರೋಬಾಟ್ ಜಗತ್ತಿನಲ್ಲಿ ಒಂದು ಸುತ್ತು

ಯಂತ್ರಮಾನವ, ಅಂದರೆ ರೋಬಾಟ್‌ಗಳ ಕುರಿತು ನಮಗೆ ಎಲ್ಲಿಲ್ಲದ ಕುತೂಹಲ. ಮೊದಲಿಗೆ ವೈಜ್ಞಾನಿಕ ಕತೆ ಹಾಗೂ ಚಲನಚಿತ್ರಗಳ ಮೂಲಕ ನಮಗೆ ಪರಿಚಯವಾದ ಈ ಪರಿಕಲ್ಪನೆ ಇಂದು ಹಲವು ಕ್ಷೇತ್ರಗಳಲ್ಲಿ ತನ್ನ ಪ್ರಭಾವ ತೋರಿಸುತ್ತಿದೆ. ಮನೆಯ ಕಸ ಗುಡಿಸುವುದರಿಂದ ಪ್ರಾರಂಭಿಸಿ ಕಾರ್ಖಾನೆಯಲ್ಲಿ ಕೆಲಸಮಾಡುವವರೆಗೆ ರೋಬಾಟ್‌ಗಳ ಕಾರ್ಯಕ್ಷೇತ್ರ ಇದೀಗ ಬಹಳ ವಿಸ್ತಾರವಾಗಿ ಬೆಳೆದಿದೆ.

ನೋಡಲು ನಮ್ಮಂತೆ ಕಾಣುವ, ನಮ್ಮಂತೆಯೇ ಕೆಲಸ ಮಾಡುವ, ನಮಗಿಂತ ಶಕ್ತಿಶಾಲಿಯಾದ ಯಂತ್ರಗಳ ಪರಿಕಲ್ಪನೆ ಬಹಳ ಹಳೆಯದು. ಈ ಯಂತ್ರಗಳಿಗೆ ರೋಬಾಟ್ ಎಂಬ ಹೆಸರು ಸಿಕ್ಕಿದ್ದು 1921ರಲ್ಲಿ, ಕರೆಲ್ ಚಪೆಕ್ ಎಂಬ ಜೆಕ್ ಲೇಖಕ ಬರೆದ ನಾಟಕದಲ್ಲಿ. ಅಂದಿನಿಂದ ಈವರೆಗೆ ಈ ಪರಿಕಲ್ಪನೆ ಸಾಕಷ್ಟು ಬೆಳೆದಿದೆ, ಕಲ್ಪನೆಯಲ್ಲಷ್ಟೇ ಸಾಧ್ಯವೆನಿಸಿದ್ದ ಹಲವು ಸಂಗತಿಗಳನ್ನು ನಿಜಜೀವನದಲ್ಲೂ ಸಾಧ್ಯವಾಗಿಸಿದೆ.

ರೋಬಾಟ್ ಎಂದಾಕ್ಷಣ ನೋಡಲು ಮನುಷ್ಯನಂತೆಯೋ ಪ್ರಾಣಿಯಂತೆಯೋ ಬೇರೊಂದು ಯಂತ್ರಗಳೇ ಮೊದಲು ನಮಗೆ ನೆನಪಾಗುತ್ತವೆ. ಆದರೆ ರೋಬಾಟ್ ಜಗತ್ತಿನಲ್ಲಿ ಇಂತಹ ಯಂತ್ರಗಳ ಪ್ರಮಾಣ ಕಡಿಮೆ ಎಂದೇ ಹೇಳಬೇಕು. ಏಕೆಂದರೆ ಇದೊಂದು ರೋಬಾಟ್ ಎಂದು ಸುಲಭಕ್ಕೆ ಗೊತ್ತೇ ಆಗದಂತಹ ಅದೆಷ್ಟೋ ಯಂತ್ರಗಳು ಇದೀಗ



ವಿಶ್ವದಲ್ಲಿ ಕಾರ್ಯನಿರ್ವಹಿಸುತ್ತಿವೆ. ರೋಬಾಟ್‌ಗಳ ಪ್ರಮುಖ ವೈಶಿಷ್ಟ್ಯವೆಂದರೆ ಅವು ಯಾವುದೇ ಪರಿಸ್ಥಿತಿಯಲ್ಲಿ ಎಷ್ಟು ಹೊತ್ತು ಬೇಕಾದರೂ ಬೇಸರವಿಲ್ಲದೆ ಕೆಲಸಮಾಡಬಲ್ಲವು. ಹೀಗಾಗಿಯೇ ಇಂದಿನ ಕಾರ್ಖಾನೆಗಳಲ್ಲಿ ಅವುಗಳಿಗೆ ಪ್ರಮುಖ ಸ್ಥಾನ. ಪೂರ್ತಿ ಯಂತ್ರಮಾನವರಷ್ಟೇ ಅಲ್ಲ 'ರೋಬಾಟಿಕ್ ಆರ್ಮ್' ಎಂದು ಕರೆಸಿಕೊಳ್ಳುವ ರೋಬಾಟ್ ತೋಳುಗಳನ್ನಷ್ಟೇ ಬಳಸಿಕೊಂಡೂ ಇಂದು ಅನೇಕ ಕೆಲಸಗಳನ್ನು ಮಾಡಿಸಿಕೊಳ್ಳಲಾಗುತ್ತಿದೆ.

ಕಾರ್ಖಾನೆಯಲ್ಲಿ ಸಾಮಾನುಗಳನ್ನು ಎತ್ತಿಡುವುದಿರಲಿ, ಶಸ್ತ್ರಚಿಕಿತ್ಸೆಯಂತಹ ಸೂಕ್ಷ್ಮ ಕೆಲಸಗಳನ್ನು ಮಾಡುವುದಿರಲಿ, ಮಂಗಳಗ್ರಹದ ಮೇಲೆ ಇಳಿದಿರುವ ವಾಹನಕ್ಕೆ ಅಲ್ಲಿನ ಮಣ್ಣಿನ ಮಾದರಿಯನ್ನು ಸಂಗ್ರಹಿಸಿಕೊಡುವುದೇ ಇರಲಿ ರೋಬಾಟ್ ತೋಳುಗಳು ಇಂತಹ ಅನೇಕ ಕೆಲಸಗಳನ್ನು ಮಾಡಬಲ್ಲವು. ಹೇಳಿದ ಕೆಲಸವನ್ನು ತೆಪ್ಪಗೆ ಮಾಡುವುದಷ್ಟೇ ಅಲ್ಲ, ಬೇರೆಬೇರೆ ಸನ್ನಿವೇಶಗಳಿಗೆ ಬೇರೆಬೇರೆ ರೀತಿಯಾಗಿ ಪ್ರತಿಕ್ರಿಯೆ ನೀಡುವ ಸಾಮರ್ಥ್ಯ ಕೂಡ ಅವುಗಳಿಗೆ ಇರುತ್ತದೆ.

ಬರಿಯ ತೋಳುಗಳೇ ಇಷ್ಟು ಕೆಲಸ ಮಾಡಿದರೆ ಇನ್ನು ಪೂರ್ಣ ರೋಬಾಟ್‌ಗಳ ವಿಷಯ ಕೇಳಬೇಕೇ? ಅವುಗಳ ಇಂದಿನ ಕಾರ್ಯಕ್ಷಮತೆ ಹಿಂದೆಂದೂ ಕಲ್ಪಿಸಿಕೊಳ್ಳಲು ಸಾಧ್ಯವಾಗದಿದ್ದ ಮಟ್ಟಕ್ಕೆ ತಲುಪಿಬಿಟ್ಟಿದೆ. ಈ ಸಾಧನೆಯ ಹಿನ್ನೆಲೆಯಲ್ಲಿ ನಾವು ಸೆನ್ಸರ್ ಹಾಗೂ ಆಕ್ಚುಯೇಟರ್‌ನಂತಹ ಸಾಧನಗಳನ್ನೂ ಕೃತಕ ಬುದ್ಧಿಮತ್ತೆಯಂತಹ ಪರಿಕಲ್ಪನೆಗಳನ್ನೂ ನೋಡಬಹುದು. ಆಧುನಿಕ ರೋಬಾಟ್ ಪಾಲಿಗೆ ಇವೇ ಚಾಲಕ ಶಕ್ತಿಗಳು.

ಮನುಷ್ಯರಂತೆಯೇ ಕಾಣುವ ಒಂದು ರೋಬಾಟ್ ಇದೆ ಎಂದುಕೊಂಡರೆ ಅದರ ಕಾರ್ಯಾಚರಣೆಗೆ ಹಲವು ಆವಶ್ಯಕತೆಗಳಿರುತ್ತವೆ. ಅದು ಓಡಾಡುವಾಗ ಸುತ್ತಮುತ್ತಲಿನ ಪರಿಸರವನ್ನು ಗಮನಿಸಿಕೊಳ್ಳಲು ಬೇಕಾದ ನೆರವನ್ನು ಸೆನ್ಸರುಗಳು ಕೊಡುತ್ತವೆ. ಕೈಕಾಲುಗಳನ್ನು ಬೇಕಾದಾಗ ಬೇಕಾದಂತೆ ಚಲಿಸುವ ಶಕ್ತಿ ಆಕ್ಚುಯೇಟರುಗಳಿಂದ ಬರುತ್ತದೆ. ಯಾವ ಸಂದರ್ಭದಲ್ಲಿ ಹೇಗೆ ವರ್ತಿಸಬೇಕು ಎನ್ನುವುದನ್ನು ಕೃತಕ ಬುದ್ಧಿಮತ್ತೆ ಹೇಳಿಕೊಡುತ್ತದೆ.

ಇವೆಲ್ಲದರ ಸಹಾಯದಿಂದ ಆಧುನಿಕ ರೋಬಾಟ್‌ಗಳು ವೈವಿಧ್ಯಮಯ ಕೆಲಸಗಳನ್ನು ಸಾಧಿಸಬಲ್ಲವು. ಉನ್ನತ ಸಾಮರ್ಥ್ಯದ ಯಂತ್ರಾಂಶಗಳು ಹಾಗೂ ಅತಿವೇಗದ ಅಂತರಜಾಲ ಸಂಪರ್ಕಗಳೂ ಅವುಗಳಿಗೆ ಸಹಾಯ ಮಾಡುತ್ತಿವೆ. ಹೋಟೆಲಿನಲ್ಲಿ ತಿಂಡಿ ತಂದುಕೊಡುವುದು, ಗುಡಿಸುವುದೆಲ್ಲ ಹಾಗಿರಲಿ, ಚಾಲಕನ ಅಗತ್ಯವಿಲ್ಲದೆ ತಾವೇ ಸಂಚರಿಸುವುದನ್ನು ಕಲಿತ ಕಾರು ರೋಬಾಟ್‌ಗಳಾಗಿವೆ.

# ಹಳಿಯಿಲ್ಲದ ರೈಲಲ್ಲ, ಇದು ಚಾಲಕನಿಲ್ಲದ ಬಂಡಿ!

ತಂತ್ರಜ್ಞಾನದಿಂದಾಗಿ ಸಾರಿಗೆ ಕ್ಷೇತ್ರದಲ್ಲಿ ಎಷ್ಟೆಲ್ಲ ಬದಲಾವಣೆಗಳಾಗಿದ್ದರೂ ವಾಹನಗಳನ್ನು ಚಲಾಯಿಸಲು - ಅವುಗಳಲ್ಲಿರುವ ತಂತ್ರಜ್ಞಾನದ ಸವಲತ್ತುಗಳನ್ನೆಲ್ಲ ಬಳಸಿಕೊಳ್ಳಲು ನಾವು ಇಂದಿಗೂ ಚಾಲಕರನ್ನೇ ಅವಲಂಬಿಸುತ್ತೇವೆ. ಈ ಕ್ಷೇತ್ರದ ಬೆಳವಣಿಗೆಗೆ ಗಮನಾರ್ಹ ಕೊಡುಗೆ ನೀಡುವ ಚಾಲಕರು ಅಲ್ಲಿನ ಬಹುತೇಕ ಸಮಸ್ಯೆಗಳಿಗೂ ಕಾರಣಕರ್ತರಾಗುತ್ತಾರೆ ಎನ್ನುವುದು ವಿಚಿತ್ರವೆನಿಸಿದರೂ ಸತ್ಯ. ಒಬ್ಬನೇ ಚಾಲಕನ ಆತುರ, ಅಶಿಸ್ತು ಅಥವಾ ಆಯಾಸ ಅದೆಷ್ಟೋ ಪ್ರಯಾಣಿಕರಿಗೆ ತೊಂದರೆಕೊಡುವ ಸಮಸ್ಯೆಯಾಗಿ ಥಟ್ಟನೆ ಬದಲಾಗಬಲ್ಲ ಸಾಧ್ಯತೆ ಈ ಕ್ಷೇತ್ರದ ಅತಿದೊಡ್ಡ ಅಪಾಯವೂ ಹೌದು.

ಪೆಟ್ರೋಲ್ ಎಷ್ಟಿದೆಯೆಂದು ಅಳೆಯುವುದನ್ನೂ ಯಾವ ಊರಿಗೆ ಯಾವ ದಾರಿಯೆಂದು ತಿಳಿಸುವುದನ್ನೂ ತಂತ್ರಜ್ಞಾನ ಬಹಳ ಸುಲಭವಾಗಿ ಮಾಡುತ್ತದಲ್ಲ, ವಾಹನ ಚಾಲನೆಯನ್ನೂ ಅದೇ ಮಾಡಿಬಿಟ್ಟರೆ ಮೇಲೆ ಹೇಳಿದ ಸಮಸ್ಯೆಗಳಲ್ಲಿ ಬಹುಪಾಲು ನಿವಾರಣೆಯಾಗಿಬಿಡುತ್ತವೆ ಅಲ್ಲವೇ?

ಚಾಲಕರಹಿತ ವಾಹನಗಳನ್ನು ಸೃಷ್ಟಿಸಲು ನಡೆಯುತ್ತಿರುವ ಪ್ರಯತ್ನಗಳ ಹಿಂದಿರುವುದು ಇದೇ ಆಲೋಚನೆ. ತನ್ನ ಸುತ್ತಮುತ್ತಲ ಪರಿಸರವನ್ನು ಗಮನಿಸಿಕೊಂಡು ಅಲ್ಲಿ ಆಗುವ ಬದಲಾವಣೆಗಳಿಗೆ ಕ್ಷಿಪ್ರವಾಗಿ ಪ್ರತಿಕ್ರಿಯೆ ನೀಡುವ ಸಾಮರ್ಥ್ಯ ವಾಹನಗಳಿಗೇ ಲಭ್ಯವಾದರೆ ಅಪಘಾತಗಳು ಕಡಿಮೆಯಾಗುತ್ತವೆ, ಪ್ರಯಾಣ ಆರಾಮದಾಯಕವಾಗಿರುತ್ತದೆ ಎನ್ನುವುದು ಈ ಪ್ರಯತ್ನಗಳ ಉದ್ದೇಶ.

ಇಂತಹ ಪ್ರಯತ್ನಗಳಲ್ಲಿ ನಿರ್ದಿಷ್ಟ ವಾಹನದ ಚಲನೆಯನ್ನೂ ಅದರ ಸುತ್ತಮುತ್ತಲ ಪರಿಸರವನ್ನೂ ಗಮನಿಸಿಕೊಳ್ಳಲು ಅನೇಕ ಸೆನ್ಸರುಗಳು ಬಳಕೆಯಾಗುತ್ತವೆ. ಮುಂದಿನ ಕಾರಿನ ಚಾಲಕ ಇದ್ದಕ್ಕಿದ್ದಂತೆ ಬ್ರೇಕ್ ಹಾಕಿದ್ದನ್ನು, ಪಕ್ಕದ ಆಟೋ ಅನಿರೀಕ್ಷಿತವಾಗಿ ನಮ್ಮ ಹಾದಿಗೆ ಅಡ್ಡಬಂದದ್ದನ್ನೆಲ್ಲ ಗುರುತಿಸಬಲ್ಲವು. ಇವು ಥಟ್ಟನೆ ಮಾನವ ಚಾಲಕರು ಚಲಾಯಿಸುವ ಇಂದಿನ ವಾಹನಗಳಲ್ಲಿ ಇಂತಹ ಹಲವಾರು ಸೌಲಭ್ಯಗಳು (ಎಬಿಎಸ್, ಕ್ರೂಸ್ ಕಂಟ್ರೋಲ್, ಪಾರ್ಕಿಂಗ್ ನೆರವು ಇತ್ಯಾದಿ) ಈಗಾಗಲೇ ಇವೆಯಾದರೂ ಅವುಗಳ ಪರಿಣಾಮಕಾರಿ ಬಳಕೆ ಹೆಚ್ಚೂ ಕಡಿಮೆ ನಮ್ಮ ನಿಯಂತ್ರಣದಲ್ಲೇ ಇರುತ್ತದೆ. ಈ ಪರಿಸ್ಥಿತಿ

ಬದಲಿಸಿ ಆಯಾ ಸನ್ನಿವೇಶಕ್ಕೆ ತಕ್ಕ ನಿರ್ಧಾರ ಕೈಗೊಳ್ಳುವ ಅಧಿಕಾರವನ್ನು ಚಾಲಕರಹಿತ ವಾಹನಗಳಲ್ಲಿ ಯಂತ್ರಕ್ಕೇ ನೀಡಲಾಗುತ್ತದೆ. ತನ್ನಲ್ಲಿರುವ ತಂತ್ರಾಂಶ ಹಾಗೂ ಅಂತರಜಾಲ - ಜಿಪಿಎಸ್ ಮತ್ತಿತರ ಸೌಲಭ್ಯಗಳಿಂದ ಸಿಗುವ ನೆರವನ್ನು ಬಳಸಿಕೊಂಡು ಈ ವಾಹನಗಳು ಸ್ವಯಂಚಾಲಿತವಾಗಿ ಸಂಚರಿಸುತ್ತವೆ.

ಅಂದಹಾಗೆ ಚಾಲಕರಹಿತ ವಾಹನಗಳ ಸಾಲಿನಲ್ಲಿರುವುದು ಕಾರುಗಳಷ್ಟೇ ಅಲ್ಲ. ರೈಲಿನಿಂದ ವಿಮಾನದವರೆಗೆ, ಬಸ್ಸು-ಲಾರಿಗಳಿಂದ ದೋಣಿ-ಹಡಗುಗಳವರೆಗೆ ಇನ್ನೂ ಅನೇಕ ಬಗೆಯ ವಾಹನಗಳನ್ನು ಚಾಲಕರಿಲ್ಲದೆ ಚಲಿಸುವಂತೆ ಮಾಡುವ ಪ್ರಯತ್ನಗಳು ನಡೆದಿವೆ. ಸಣ್ಣಗಾತ್ರದ ಚಾಲಕರಹಿತ ವಿಮಾನಗಳು (ಡ್ರೋನ್), ಮೆಟ್ರೋ ರೈಲುಗಳು ಈಗಾಗಲೇ ಬಳಕೆಯಲ್ಲೂ ಇವೆ. ಅಷ್ಟೇ ಏಕೆ, ದೊಡ್ಡ ವಿಮಾನಗಳಲ್ಲಿ ಮಾನವ ಪೈಲಟ್‌ಗಳಿಗೆ ನೆರವಾಗುವ 'ಆಟೋಪೈಲಟ್ ತಂತ್ರಜ್ಞಾನ ಕೂಡ ಚಾಲಕರಹಿತ ಚಾಲನೆಯ ಒಂದು ರೂಪವೇ.

ರೈಲು ಹಾಗೂ ಮೆಟ್ರೋ ಜಾಲಗಳಲ್ಲಿ ತಮ್ಮದೇ ಆದ ಪ್ರತ್ಯೇಕ ಪಥ ಇರುವುದರಿಂದ ಅಲ್ಲಿ ಸಾಗುವ ಚಾಲಕರಹಿತ ರೈಲುಗಳಿಗೆ ಬಾಹ್ಯ ಅಡಚಣೆಗಳು ಎದುರಾಗುವ ಸಾಧ್ಯತೆ



ಕಡಿಮೆಯಿರುತ್ತದೆ. ಆದರೆ ಚಾಲಕರಹಿತ ವಾಹನಗಳು ರಸ್ತೆಗಳಲ್ಲಿ ಸಾಗುವಾಗ ಮಾನವ ಚಾಲಕರ ಜೊತೆಗೆ ತಮ್ಮ ಹಾದಿಯನ್ನು ಹಂಚಿಕೊಳ್ಳಬೇಕಾಗುತ್ತದೆ, ಪಾದಚಾರಿಗಳ ಕಡೆಗೂ ಗಮನ ನೀಡಬೇಕಾಗುತ್ತದೆ. ಇದರಿಂದಾಗಿ ಅವುಗಳ ಕಾರ್ಯಾಚರಣೆಗೆ ಎದುರಾಗುವ ಹೆಚ್ಚುವರಿ ಸವಾಲನ್ನು ನಿಭಾಯಿಸುವತ್ತಲೂ ತಂತ್ರಜ್ಞಾನ ನಿರ್ಮಾಪಕರು ಗಮನಹರಿಸುತ್ತಿದ್ದಾರೆ.

ತಂತ್ರಜ್ಞಾನದ ಜೊತೆಗೆ ಕಾನೂನಾತ್ಮಕ ಹಾಗೂ ನೈತಿಕ ಪ್ರಶ್ನೆಗಳ ಬಗೆಗೂ ಚರ್ಚೆ ನಡೆದಿದೆ. ಚಾಲಕರಹಿತ ವಾಹನಗಳು ಅಪಘಾತಕ್ಕೆ ಕಾರಣವಾದರೆ ಅದಕ್ಕೆ ಯಾರು ಜವಾಬ್ದಾರಿ, ಇಂತಹ ವಾಹನವೊಂದರ ಪ್ರಯಾಣಿಕ ಹಾಗೂ ಇತರರ ನಡುವೆ ಒಬ್ಬರ ಸುರಕ್ಷತೆಯನ್ನು ಆಯ್ದುಕೊಳ್ಳುವ ಸಂದಿಗ್ಧ ಪರಿಸ್ಥಿತಿ ಎದುರಾದರೆ ಚಾಲಕರಹಿತ ವಾಹನಗಳ ಪ್ರತಿಕ್ರಿಯೆ ಏನಿರಬೇಕು ಎನ್ನುವುದೆಲ್ಲ ಇಂತಹ ಪ್ರಶ್ನೆಗಳಿಗೆ ಕೆಲ ಉದಾಹರಣೆಗಳು.

* * *

## ಮಿತ್ರನೋ ಶತ್ರುವೋ?

ಯಂತ್ರಮಾನವರ ಬಗ್ಗೆ ಕುತೂಹಲ ಇರುವಂತೆಯೇ ಅವುಗಳನ್ನು ಕುರಿತ ಭೀತಿಯೂ ನಮ್ಮಲ್ಲಿದೆ. ಮನುಷ್ಯರನ್ನು ಅವು ಆಳಬಹುದು ಎನ್ನುವುದಕ್ಕಿಂತ ನಮ್ಮ ಕೆಲಸಗಳನ್ನು ರೋಬಾಟ್‌ಗಳು ಕಿತ್ತುಕೊಳ್ಳಬಹುದು ಎನ್ನುವುದು ಈ ಭೀತಿಗೆ ಪ್ರಮುಖ ಕಾರಣ.

ಯಂತ್ರಮಾನವರಲ್ಲೂ ಆಲೋಚನೆಯ ಶಕ್ತಿ ಬೆಳೆಸುವ - ವಿಭಿನ್ನ ಸನ್ನಿವೇಶಗಳಿಗೆ ಬೇರೆಬೇರೆ ರೀತಿಯಲ್ಲಿ ಪ್ರತಿಕ್ರಿಯೆ ನೀಡುವಂತೆ ಮಾಡುವ ಪ್ರಯತ್ನಗಳು ನಡೆದಿವೆಯಲ್ಲ, ಅವು ಮುಂದೊಮ್ಮೆ ಮನುಷ್ಯರ ಕೆಲಸಗಳನ್ನು ಮನುಷ್ಯರಷ್ಟೇ ಸಮರ್ಥವಾಗಿ ಮಾಡುವಂತಾಗಲಿ ಎನ್ನುವುದು ಈ ಪ್ರಯತ್ನಗಳ ಹಿಂದಿನ ಉದ್ದೇಶ. ರೋಬಾಟ್‌ಗಳನ್ನು ಕುರಿತ ಭೀತಿಗೆ ಕಾರಣವಾಗಿರುವುದೂ ಇದೇ ಅಂಶ.

ಆದರೆ ಇಂತಹ ಪ್ರಯತ್ನಗಳು ಸಂಪೂರ್ಣವಾಗಿ ಸಫಲವಾಗಲು ಇನ್ನೂ ಬಹಳ ಸಮಯ ಬೇಕು ಎಂದು ತಜ್ಞರು ಹೇಳುತ್ತಾರೆ. ನಿರ್ದಿಷ್ಟ ಹೆಜ್ಜೆಗಳನ್ನು ಅನುಸರಿಸಿ ಪದೇಪದೇ ಮಾಡುವಂತಹ ಕೆಲಸಗಳನ್ನು ನಮ್ಮ ಬದಲು ರೋಬಾಟ್‌ಗಳೇ ಸುಲಭವಾಗಿ ಮಾಡಬಲ್ಲವು; ಆದರೆ ಆಲೋಚಿಸಿ ಮಾಡಬೇಕಾದ ಕೆಲಸಗಳನ್ನೂ ಕಲಿತು ಅವು ನಮ್ಮ ಪ್ರತಿಸ್ಪರ್ಧಿಗಳಾಗಿ ಬೆಳೆಯುವುದು ಕಷ್ಟ ಎನ್ನುವುದು ಅವರ ಹೇಳಿಕೆ.

ಅಂಥದ್ದೊಂದು ಹಂತ ತಲುಪುವವರೆಗೂ ರೋಬಾಟ್‌ಗಳು ನಮ್ಮೊಡನೆ ಸ್ಪರ್ಧಿಸುವುದಕ್ಕಿಂತ ನಮ್ಮ ಜೊತೆಗಾರರಾಗಿ ಬೆಳೆಯುವ ಸಾಧ್ಯತೆಯೇ ಹೆಚ್ಚು. ಹೀಗಾಗಿ ರೋಬಾಟ್‌ಗಳ ಬಗ್ಗೆ ಭೀತಿ ಇಟ್ಟುಕೊಳ್ಳದೆ ಅವನ್ನು ನಮ್ಮ ಸಹಾಯಕರನ್ನಾಗಿ ಬೆಳೆಸಿಕೊಳ್ಳುವುದು ಮತ್ತು ಬಳಸಿಕೊಳ್ಳುವುದು ಜಾಣತನ.

**ಟಿ.ಜಿ ಶ್ರೀನಿಧಿ**

## ಲೇಖಕರ ಪರಿಚಯ



ಟಿ..ಜಿ ಶ್ರೀನಿಧಿ ಅವರು ಕನ್ನಡದಲ್ಲಿ ಮಾಹಿತಿ ತಂತ್ರಜ್ಞಾನಕ್ಕೆ ಸಂಬಂಧಿಸಿ ಬರೆಯುತ್ತಿರುವ ಲೇಖಕರು ಮತ್ತು ಅಂಕಣಕಾರರಲ್ಲಿ ಒಬ್ಬರು. ಮೈಸೂರಿನ ಶ್ರೀ ಜಯಚಾಮರಾಜೇಂದ್ರ ಕಾಲೇಜ್ ಆಫ್ ಇಂಜಿನಿಯರಿಂಗ್ ನಿಂದ ಬಿ.ಇ ಪದವೀಧರರಾದ ಇವರು ಬಿಟ್ಸ್‌ಪಿಲಾನಿಯಿಂದ ಸಾಫ್ಟ್‌ವೇರ್ ಸಿಸ್ಟಂಸ್ ವಿಷಯದಲ್ಲಿ ಎಂ.ಎಸ್ ಸ್ನಾತಕೋತ್ತರ ಪದವಿ ಪಡೆದಿದ್ದಾರೆ. ಹಾರುವ ಕನಸು ಕಂಡವರು, ಅಂತರಿಕ್ಷದ ಅದ್ಭುತಗಳು, ಆಫೀಸ್, ವೆಬ್ ವಿಹಾರ, ತಿನ್ನಲಾಗದ ಬಿಸ್ಕತ್ತು ನುಂಗಲಾಗದ ಟ್ಯಾಬ್ಲೆಟ್ ಮೊದಲಾದ ಪುಸ್ತಕಗಳನ್ನು ಮತ್ತು ವೆಬ್ ವಿಹಾರ, ಬದುಕು ಮತ್ತು ವಿಜ್ಞಾನ, ವಿಜ್ಞಾಪನೆ, ಸ್ವತಂತ್ರ, ಈ ಹೊತ್ತು ಈ ಲೋಕ, ಟೆಕ್ ಲೋಕ ಮೊದಲಾದ ಹಲವು ಅಂಕಣಗಳನ್ನು ದಿನ ಪತ್ರಿಕೆಗಳಲ್ಲಿ ಬರೆಯುತ್ತಿದ್ದಾರೆ. 'ತಿನ್ನಲಾಗದ ಬಿಸ್ಕತ್ತು ನುಂಗಲಾಗದ ಟ್ಯಾಬ್ಲೆಟ್' ಕೃತಿಗೆ ಕರ್ನಾಟಕ ವಿಜ್ಞಾನ ಮತ್ತು ತಂತ್ರಜ್ಞಾನ ಅಕಾಡೆಮಿಯ ಶ್ರೇಷ್ಠ ಲೇಖಕ ಪ್ರಶಸ್ತಿ ಲಭಿಸಿದೆ.

## ಚಟುವಟಿಕೆಗಳು

### ಉತ್ತರಿಸಿರಿ

1. ರೋಬಾಟ್ ಗಳಿಗೆ ಕಾರ್ಖಾನೆಗಳಲ್ಲಿ ಹೆಚ್ಚಿನ ಮಹತ್ವ ಸಿಗಲು ಕಾರಣವೇನು?
2. ರೋಬಾಟ್ ಗಳು ಕಾರ್ಯವೆಸಗುವ ಬಗೆ ಹೇಗೆ?
3. ಇಂದು ವಾಹನಗಳಲ್ಲಿ ತಂತ್ರಜ್ಞಾನ ಹೇಗೆ ಬಳಕೆಯಾಗುತ್ತಿದೆ?
4. ಉದ್ಯೋಗಕ್ಕೆ ಸಂಬಂಧಿಸಿದಂತೆ ರೋಬಾಟ್‌ಗಳು ಯಾವ ರೀತಿಯ ಭೀತಿ ಮೂಡಿಸುತ್ತಿವೆ?

### ಅಭಿಪ್ರಾಯ ಬರೆಯಿರಿ

'ರೋಬಾಟ್‌ಗಳು ನಮ್ಮೊಡನೆ ಸ್ಪರ್ಧಿಸುವುದಕ್ಕಿಂತ ನಮ್ಮ ಜೊತೆಗಾರರಾಗಿ ಬೆಳೆಯುವ ಸಾಧ್ಯತೆಯೇ ಹೆಚ್ಚು. ಹೀಗಾಗಿ ರೋಬಾಟ್‌ಗಳ ಬಗ್ಗೆ ಭೀತಿ ಇಟ್ಟುಕೊಳ್ಳದೆ ಅವನ್ನು ನಮ್ಮ ಸಹಾಯಕರನ್ನಾಗಿ ಬೆಳೆಸಿಕೊಳ್ಳುವುದು ಮತ್ತು ಬಳಸಿಕೊಳ್ಳುವುದು ಜಾಣತನ.' ಈ ಬಗ್ಗೆ ನಿಮ್ಮ ಅಭಿಪ್ರಾಯಗಳನ್ನು ಚರ್ಚಿಸಿ ಬರೆಯಿರಿ.

### ಸಂವಾದ ಏರ್ಪಡಿಸಿರಿ

ನಿಮ್ಮ ತರಗತಿಗೆ ತಂತ್ರಜ್ಞಾನ ತಜ್ಞರನ್ನು ಆಹ್ವಾನಿಸಿ 'ತಂತ್ರಜ್ಞಾನ ಮಾನವನ ಮಿತ್ರನೋ ಶತ್ರುವೋ' ಎಂಬ ವಿಷಯದ ಕುರಿತು ಸಂವಾದವೊಂದನ್ನು ಏರ್ಪಡಿಸಿರಿ.

### ಕಾರ್ಯಯೋಜನೆ

ನಮ್ಮ ದೈನಂದಿನ ಜೀವನದ ವಿವಿಧ ಕ್ಷೇತ್ರಗಳಲ್ಲಿ ತಂತ್ರಜ್ಞಾನದ ಬಳಕೆಯು ಯಾವಯಾವ ಕೆಲಸಗಳನ್ನು ಸರಳಗೊಳಿಸಿದೆ ಎಂದು ಕಂಡುಕೊಂಡು ನಿಮ್ಮ ನೋಟು ಪುಸ್ತಕದಲ್ಲಿ ಬರೆಯಿರಿ. ಯಾವುದಾದರೂ ಒಂದೆರಡರ ಕುರಿತು ವಿವರಣೆ ಬರೆಯಿರಿ.

ಉದಾ: ಕೃಷಿ ಕ್ಷೇತ್ರದಲ್ಲಿ ಹವಾಮಾನ ತಿಳಿಯಲು ವಿವಿಧ ಮೊಬೈಲ್ ಆ್ಯಪ್ ಗಳ ಬಳಕೆ

ಶಿಕ್ಷಣ ಕ್ಷೇತ್ರದಲ್ಲಿ ಆನ್ಲೈನ್ ತರಗತಿಗಳು

..........................................................................................

..........................................................................................

## ಲೇಖನ ತಯಾರಿಸಿರಿ

ನಾವು ನಮ್ಮ ನಿತ್ಯ ಜೀವನದ ವಿವಿಧ ಸಂದರ್ಭಗಳಲ್ಲಿ ಒಂದಲ್ಲ ಒಂದು ರೀತಿಯಲ್ಲಿ ತಂತ್ರಜ್ಞಾನವನ್ನು ಬಳಸುತ್ತೇವೆ. ಇದು ಕೆಲವೊಮ್ಮೆ ಅನುಕೂಲವಾಗಿ ಮತ್ತು ಕೆಲವೊಮ್ಮೆ ಅನನುಕೂಲವಾಗಿ ಪರಿಣಮಿಸುವುದುಂಟು. ಈ ಬಗ್ಗೆ ಗೆಳೆಯರೊಂದಿಗೆ ಚರ್ಚಿಸಿ 'ತಂತ್ರಜ್ಞಾನದ ಸದುಪಯೋಗ' ಎಂಬ ವಿಷಯದಲ್ಲಿ ವಿಚಾರ ಸಂಕಿರಣದಲ್ಲಿ ಮಂಡಿಸಲು ಟಿಪ್ಪಣಿಯೊಂದನ್ನು ಬರೆಯಿರಿ.

## ಪ್ರಶ್ನೆ ತಯಾರಿಸಿರಿ

ಕೆಳಗಿನ ವಾಕ್ಯಗಳು ಉತ್ತರವಾಗಿ ಬರುವಂತೆ ಪ್ರಶ್ನೆಗಳನ್ನು ತಯಾರಿಸಿರಿ.

1. ಭಾರತದ ಮೊದಲ ಪ್ರಧಾನಿ ಜವಹರ್ ಲಾಲ್ ನೆಹರೂ
2. ಇಂಧನ ಖಾಲಿಯಾಗಿ ಕಾರು ನಡುರಸ್ತೆಯಲ್ಲಿ ನಿಂತಿತು.
3. ಮರದಿಂದ ಹಣ್ಣು ಕೆಳಗೆ ಬಿತ್ತು.
4. 1947 ಆಗಸ್ಟ್ 15ರಂದು ಭಾರತಕ್ಕೆ ಸ್ವಾತಂತ್ರ್ಯ ಲಭಿಸಿತು.
5. ಬುಟ್ಟಿಯಲ್ಲಿ ಹತ್ತು ಹಣ್ಣುಗಳಿವೆ.

## ಹೊಂದಿಸಿ ಬರೆಯಿರಿ

ಕೆಳಗಿನವುಗಳನ್ನು ಸೂಕ್ತವಾದ ರೀತಿಯಲ್ಲಿ ಹೊಂದಿಸಿ ಬರೆಯಿರಿ.

- ರೋಬಾಟ್
- ಕಾರ್ಖಾನೆಗಳಲ್ಲಿ
- ಸೆನ್ಸರ್ ಮತ್ತು ಆಕ್ಚುಯೇಟರ್
- ಡ್ರೋನ್ ಗಳು

- ಚಾಲಕ ರಹಿತ ವಿಮಾನಗಳು
- ಕೃತಕ ಬುದ್ಧಿಮತ್ತೆ
- 1921ನಲ್ಲಿ ಕರೆಲ್ ಚಪೆಕ್
- ರೋಬಾಟ್ ತೋಳುಗಳು

# ಪದಕೋಶ

| | | |
|---|---|---|
| | **ಅ** | |
| ಅತಿಕ್ರಮ | - | ಗಡಿ ಮೀರು |
| ಅತಿವೃಷ್ಟಿ | - | ಹೆಚ್ಚು ಮಳೆ |
| ಅಧ್ವಾನ | - | ಹದಗೆಟ್ಟ ಸ್ಥಿತಿ |
| ಅಭೀಷ್ಟ | - | ಅಭಿಲಾಶೆ, ಬಯಸಿದ್ದು |
| ಅರುಗಳಿಗೆ | - | ಅರೆಗಳಿಗೆ |
| ಅಸಂಖ್ಯ | - | ಲೆಕ್ಕವಿಲ್ಲದಷ್ಟು |
| | **ಆ** | |
| ಆಚ್ಛಾದಿತ | - | ಮುಚ್ಚಲ್ಪಟ್ಟ |
| ಆಧಿಪತ್ಯ | - | ಯಜಮಾನಿಕೆ |
| | **ಇ** | |
| ಇಂಗಿಸು | - | ಬತ್ತಿಸು |
| | **ಉ** | |
| ಉಡಾಫೆ | - | ಅಸಡ್ಡೆ |
| | **ಎ** | |
| ಎರವಲು | - | ಸಾಲ |
| | **ಒ** | |
| ಒಡನಾಡಿ | - | ಗೆಳೆಯ, ಸ್ನೇಹಿತ |
| | **ಕ** | |
| ಕಂದರ | - | ಕಣಿವೆ, ಗುಹೆ |
| ಕರತಾಡನ | - | ಕೈಚಪ್ಪಾಳೆ |
| ಕಳಸ | - | ಕಲಶ |
| ಕುಂಟೆ | - | ವ್ಯವಸಾಯದ ಒಂದು ಉಪಕರಣ, ಮರದ ತುಂಡು |
| ಕೊಟ್ಟಣ | - | ಬತ್ತ ಕುಟ್ಟುವ ಕೆಲಸ, ಬತ್ತ ಕುಟ್ಟುವ ಒರಳು, ಕುಟ್ಟಾಣಿ |
| ಕೊರಡು | - | ಒಣಗಿದ ಮರದ ತುಂಡು |
| | **ಗ** | |
| ಗಂಗಳ | - | ಬಟ್ಟಲು |
| ಗಣಿಸದೆ | - | ಲೆಕ್ಕಿಸದೆ |
| ಗವುಳಿ | - | ಹಲ್ಲಿ |
| ಗಿರಿ | - | ಪರ್ವತ, ಬೆಟ್ಟ |
| ಗುಡಾಣ | - | ದೊಡ್ಡ ಮಡಕೆ |
| ಗೋರಿ | - | ಸಮಾಧಿ |
| ಗೌಪ್ಯ | - | ಗುಟ್ಟು |
| | **ಘ** | |
| ಘಾಸಿ | - | ತೊಂದರೆ |
| | **ಚ** | |
| ಚಂಡಭಟ | - | ಉಗ್ರ ದೇವತೆಗೆ ಬಲಿ ನೀಡುವ ಸೇವಕ, ಬಲಿಷ್ಠ ಸೇವಕ |
| | **ಜ** | |
| ಜಂಗಮ | - | ಸಂಚಾರ ನಡೆಸುವ |
| ಜಟ್ಟಿ | - | ಕುಸ್ತಿಪಟು |
| ಜೋಗಿ | - | ನಿಂತಲ್ಲಿ ನಿಲ್ಲದೆ ಅಲೆಯುವವರು |
| | **ಢ** | |
| ಢಾಲು | - | ಗುರಾಣಿ |
| | **ತ** | |
| ತತ್ತರಿಸು | - | ನಡುಗು |
| ತರಾಟೆ | - | ಗದರಿಸುವಿಕೆ |
| ತಳಿರು | - | ಚಿಗುರು, ಚಿಗುರೊಡೆ |
| ತೆಪ್ಪಗೆ | - | ಸುಮ್ಮನೆ |
| ತೊಂಗಲು | - | ಗೊಂಡೆ, ಕುಚ್ಚು |
| | **ದ** | |
| ದಫ | - | ಸಲ |
| ದಾರಿದ್ರ್ಯ | - | ಬಡತನ |
| ದುಗುಡ | - | ದುಃಖ |
| ದುರ್ಗಮ | - | ಪ್ರವೇಶಿಸಲಾಗದ |
| ದೇಸಾಂತರ | - | ಬೇರೆ ದೇಶ |
| ದೈತ್ಯ | - | ದೊಡ್ಡದಾದ |

ನ

ನಿಕೃಷ್ಟ - ಕೀಳಾದ, ತುಚ್ಛವಾದ
ನಿಕ್ಷೇಪ - ನೆಲದೊಳಗೆ ಹುದುಗಿಟ್ಟ ಬೆಲೆ ಬಾಳುವ ವಸ್ತು
ನಿರ್ನಾಮ - ಹೆಸರಿಲ್ಲದಂತೆ

ಪ

ಪತನ - ಅವನತಿ
ಪರಿಕರ - ಸಾಮಗ್ರಿ
ಪರುಸೆ - ಜಾತ್ರೆ
ಪೀಳಿಗೆ - ವಂಶ
ಪ್ರಪಾತ - ಕಣಿವೆ
ಪ್ರಕೋಪ - ರೌದ್ರ

ಫ

ಫಾಸಲೆ - ದೂರ
ಫಾಶೀ - ಗಲ್ಲುಶಿಕ್ಷೆ

ಬ

ಬಲಾಢ್ಯ - ಶಕ್ತಿವಂತ
ಬಾಂಡ್ಲಿ - ಬಾಣಲೆ
ಬಿಗಡಾಯಿಸು - ಕೈಮೀರು
ಬುರುಖಿ - ಚಿಲುಮೆ
ಬೈರಾಗಿ - ವೈರಾಗ್ಯ ಹೊಂದಿದವ
ಬೋರಲು - ಬುಡಮೇಲು, ಮಖಾಡೆಯಾಗಿರುವುದು

ಭ

ಭಗ್ನ - ಮುರಿದ, ಹಾಳಾದ

ಮ

ಮಾಧವೀಲತೆ - ಇರುವಂತಿಗೆ
ಮಾರ್ಬಲ - ಸೈನ್ಯ
ಮಾರ್ಬಲ - ದೊಡ್ಡ ಸೈನ್ಯ
ಮಾಲು - ಸರಕು, ಸಾಮಗ್ರಿ
ಮಿರುಗು - ಹೊಳೆ
ಮೊಂಡ - ಹಠಮಾರಿ

ರ

ರೆಂಟೆ - ನೇಗಿಲಿನಂಥ ಒಂದು ಬಗೆಯ ಸಾಧನ

ಲ

ಲಕ್ಷ್ಯ - ಗಮನ, ಗುರಿ
ಲಗ್ಗೆ - ಮುತ್ತಿಗೆ

ವ

ವಿಲಾಯತಿ - ಅನ್ಯದೇಶ, ಇಂಗ್ಲೆಂಡ್ ಮುಂತಾದ ಯುರೋಪ್ ದೇಶಗಳು
ವಿವರ್ಣ - ಬಣ್ಣವಿಲ್ಲದ, ಕಳಾಹೀನ

ಸ

ಸನ್ಯಾಸಿ - ಸುಖಗಳನ್ನು ತೊರೆದವನು
ಸಮ್ಮಿಳಿತ - ಒಟ್ಟುಗೂಡು
ಸವಲತ್ತು - ಸೌಕರ್ಯ
ಸಹ್ಯ - ಸಹಿಸಲು ಸಾಧ್ಯವಾದ
ಸೀಳಾದೀಲಿ - ಕವಲುದಾರಿಯಲ್ಲಿ, ಸೀಳು ಹಾದಿಯಲ್ಲಿ
ಸೂರೆ - ಲೂಟಿ
ಸೊಗ - ಬೆಡಗು, ಚೆಲುವು
ಸ್ವಾಹಾಕಾರ - ನುಂಗುವುದು

ಹ

ಹಸನ್ಮುಖಿ - ನಗುಮುಖ ಉಳ್ಳವನು
ಹಳುವು - ಕಣಿವೆ, ಕಾಡು
ಹಾವಳಿ - ಉಪಟಳ
ಹಿಮಶೀತಲ - ಹಿಮದಟ್ಟು ತಣ್ಣಗಿನ
ಹುದುಗು - ಅಡಗು
ಹುಂಬ - ಅವಿವೇಕಿ, ದಡ್ಡ
ಹೇರು - ಹೊರೆ, ಭಾರವನ್ನು ತುಂಬು

# ಭಾರತದ ಸಂವಿಧಾನ

ಭಾಗ IV ಕ

## ಕರ್ತವ್ಯಗಳು

51ಕ. **ಮೂಲಭೂತ ಕರ್ತವ್ಯಗಳು – ಈ ಕೆಳಗಿನವುಗಳು ಭಾರತದ ಪ್ರತಿಯೊಬ್ಬ ಪೌರನ ಕರ್ತವ್ಯಗಳಾಗಿವೆ.**

(ಕ) ಸಂವಿಧಾನವನ್ನು ಅನುಸರಿಸುವುದು, ಅದರ ಆದರ್ಶಗಳನ್ನು, ಸಂಸ್ಥೆಗಳನ್ನು ರಾಷ್ಟ್ರಧ್ವಜವನ್ನು ಮತ್ತು ರಾಷ್ಟ್ರಗೀತೆಯನ್ನು ಗೌರವಿಸುವುದು;

(ಖ) ನಮ್ಮ ರಾಷ್ಟ್ರೀಯ ಸ್ವಾತಂತ್ರ್ಯ ಸಂಗ್ರಾಮಕ್ಕೆ ಸ್ಫೂರ್ತಿದಾಯಕವಾದ ಉದಾತ್ತ ಆದರ್ಶಗಳನ್ನು ಘೋಷಿಸುವುದು ಮತ್ತು ಅನುಸರಿಸುವುದು.

(ಗ) ಭಾರತದ ಸಾರ್ವಭೌಮತೆಯನ್ನು, ಏಕತೆಯನ್ನು ಮತ್ತು ಅಖಂಡತೆಯನ್ನು ಗೌರವಿಸುವುದು ಹಾಗೂ ಸಂರಕ್ಷಿಸುವುದು.

(ಘ) ದೇಶವನ್ನು ರಕ್ಷಿಸಲು ಮತ್ತು ರಾಷ್ಟ್ರಕ್ಕೆ ಸೇವೆ ಸಲ್ಲಿಸಲು ಕರೆ ಬಂದಾಗ ಅದನ್ನು ಅನುಸರಿಸುವುದು.

(ಙ) ಧಾರ್ಮಿಕ, ಭಾಷಿಕ ಮತ್ತು ಪ್ರಾದೇಶಿಕ ಅಥವಾ ಜಾತಿ ಪಂಗಡಗಳ ಭಿನ್ನತೆಗಳಿಂದ ಅತೀತವಾಗಿ ಭಾರತದ ಎಲ್ಲ ಜನತೆಯಲ್ಲಿ ಸಾಮರಸ್ಯವನ್ನು ಮತ್ತು ಭ್ರಾತೃತ್ವದ ಭಾವನೆಯನ್ನು ಬೆಳೆಸುವುದು, ಸ್ತ್ರೀಯರ ಗೌರವಕ್ಕೆ ಕುಂದುಂಟುಮಾಡುವ ಆಚರಣೆಯನ್ನು ಬಿಟ್ಟು ಬಿಡುವುದು.

(ಚ) ನಮ್ಮ ಸಂಸ್ಕೃತಿಯ ಭವ್ಯ ಪರಂಪರೆಯನ್ನು ಗೌರವಿಸುವುದು ಹಾಗೂ ಕಾಪಾಡುವುದು.

(ಛ) ಅರಣ್ಯಗಳು, ಸರೋವರಗಳು, ನದಿಗಳು ಮತ್ತು ವನ್ಯಜೀವಿಗಳು ಸೇರಿದಂತೆ ನೈಸರ್ಗಿಕ ಪರಿಸರವನ್ನು ಸಂರಕ್ಷಿಸುವುದು ಹಾಗೂ ಅಭಿವೃದ್ಧಿ ಮಾಡುವುದು, ಪ್ರಾಣಿಗಳಿಗೆ ಅನುಕಂಪ ತೋರಿಸುವುದು.

(ಜ) ವೈಜ್ಞಾನಿಕ ಮನೋಭಾವ, ಮಾನವೀಯತೆ, ಜಿಜ್ಞಾಸೆ ಮತ್ತು ಸುಧಾರಣ ಪ್ರವೃತ್ತಿಯನ್ನು ಬೆಳೆಸುವುದು.

(ಝ) ಸಾರ್ವಜನಿಕ ಸೊತ್ತನ್ನು ರಕ್ಷಿಸುವುದು ಮತ್ತು ಹಿಂಸೆಯನ್ನು ತ್ಯಜಿಸುವುದು.

(ಞ) ರಾಷ್ಟ್ರವು ನಿರಂತರವಾಗಿ ಸಾಧನೆ ಮತ್ತು ಸಿದ್ಧಿಯ ಔನ್ನತ್ಯಕ್ಕೆ ತಲುಪಲು ವೈಯಕ್ತಿಕ ಹಾಗೂ ಸಾಮಾಜಿಕ ಚಟುವಟಿಕೆಯ ಎಲ್ಲ ಕಾರ್ಯಕ್ಷೇತ್ರಗಳಲ್ಲಿ ಪ್ರಾಮಾಣಿಕವಾಗಿ ಶ್ರಮಿಸುವುದು.

(ಟ) ಆರರಿಂದ ಹದಿನಾಲ್ಕು ವರ್ಷಗಳ ನಡುವಿನ ತನ್ನ ಮಕ್ಕಳಿಗೋ, ತನ್ನ ರಕ್ಷಣೆಯಲ್ಲಿರುವ ಮಕ್ಕಳಿಗೋ ಆಯಾ ಸಂದರ್ಭಾನುಸಾರ ಹೆತ್ತವರೋ ರಕ್ಷಕರೋ ವಿದ್ಯಾಭ್ಯಾಸಕ್ಕಿರುವ ಅವಕಾಶವನ್ನು ಏರ್ಪಡಿಸುವುದು.

# ಮಕ್ಕಳ ಹಕ್ಕುಗಳು

ಪ್ರೀತಿಯ ಮಕ್ಕಳೇ,

ನಿಮ್ಮ ಹಕ್ಕುಗಳ ಕುರಿತು ತಿಳಿಯಬೇಕಲ್ಲವೇ? ಹಕ್ಕುಗಳ ಕುರಿತಾಗಿರುವ ತಿಳುವಳಿಕೆಯು ನಿಮ್ಮ ಭಾಗವಹಿಸುವಿಕೆ, ಸಂರಕ್ಷಣೆ, ಸಾಮಾಜಿಕ ನ್ಯಾಯ ಎಂಬಿವುಗಳನ್ನು ಖಾತರಿಪಡಿಸಲು ಪ್ರೇರಣೆಯನ್ನೂ ಪ್ರಚೋದನೆಯನ್ನೂ ನೀಡುತ್ತದೆ. ನಿಮ್ಮ ಹಕ್ಕುಗಳನ್ನು ಸಂರಕ್ಷಿಸಲು ಈಗ ಒಂದು ಆಯೋಗವು ಕಾರ್ಯಾಚರಿಸುತ್ತಿದೆ. 'ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ' ಎಂದು ಅದರ ಹೆಸರು. ನಿಮ್ಮ ಹಕ್ಕುಗಳು ಯಾವುವು ಎಂದು ನೋಡೋಣ.

- ವಾಕ್ ಮತ್ತು ಅಭಿವ್ಯಕ್ತಿ ಸ್ವಾತಂತ್ರ್ಯ.
- ಜೀವ ಮತ್ತು ವ್ಯಕ್ತಿ ಸ್ವಾತಂತ್ರ್ಯದ ರಕ್ಷಣೆ.
- ಪರಿಪೂರ್ಣವಾದ ಬದುಕು ಹಾಗೂ ವಿಕಾಸದ ಹಕ್ಕು.
- ಜಾತಿ, ಮತ, ವರ್ಗ, ವರ್ಣ ಎಂಬ ಚಿಂತನೆಗಳನ್ನು ಮೀರಿ ಗೌರವಿಸಲ್ಪಡುವ ಮತ್ತು ಅಂಗೀಕರಿಸಲ್ಪಡುವ ಹಕ್ಕು.
- ದೈಹಿಕ, ಮಾನಸಿಕ ಹಾಗೂ ಲೈಂಗಿಕ ದೌರ್ಜನ್ಯಗಳಿಂದ ರಕ್ಷಣೆ ಪಡೆಯಲೂ ಶುಶ್ರೂಷೆ ಪಡೆಯಲೂ ಇರುವ ಹಕ್ಕು.
- ಬಾಲ ಕಾರ್ಮಿಕತನದಿಂದ ಹಾಗೂ ಅಪಾಯಕಾರಿ ಕೆಲಸಗಳಿಂದ ಬಿಡುಗಡೆ.
- ಪಾಲ್ಗೊಳ್ಳುವಿಕೆಯ ಹಕ್ಕು.
- ಬಾಲ್ಯವಿವಾಹದಿಂದ ರಕ್ಷಣೆ.
- ವೈಯಕ್ತಿಕ ಸಂಸ್ಕೃತಿಯನ್ನು ಅರಿತುಕೊಂಡು ಅದನ್ನು ಅನುಸರಿಸಿ ಬದುಕುವ ಸ್ವಾತಂತ್ರ್ಯ.
- ನಿರ್ಲಕ್ಷ್ಯಕ್ಕೆ ಒಳಗಾಗದಂತೆ ಸಂರಕ್ಷಣೆ.
- ಉಚಿತ ಹಾಗೂ ಕಡ್ಡಾಯ ಶಿಕ್ಷಣದ ಹಕ್ಕು.
- ಕಲಿಯಲೂ ಆಟವಾಡಲೂ ಇರುವ ಹಕ್ಕು.
- ಪ್ರೀತಿ ಹಾಗೂ ರಕ್ಷಣೆಯನ್ನು ಒದಗಿಸುವ ಕುಟುಂಬ ಹಾಗೂ ಸಮಾಜವನ್ನು ಪಡೆಯುವ ಹಕ್ಕು.

## ನಿಮ್ಮ ಕೆಲವು ಜವಾಬ್ದಾರಿಗಳು

- ಶಾಲೆ, ಸಾರ್ವಜನಿಕ ಸೊತ್ತುಗಳನ್ನು ಹಾನಿ ಮಾಡದೆ ರಕ್ಷಿಸುವುದು.
- ಶಾಲೆಯಲ್ಲಿ ಹಾಗೂ ಕಲಿಕಾ ಚಟುವಟಿಕೆಗಳಲ್ಲಿ ಶಿಸ್ತು ಪಾಲಿಸುವುದು.
- ಶಾಲಾ ಅಧಿಕಾರಿಗಳನ್ನು, ಅಧ್ಯಾಪಕರನ್ನು, ಹೆತ್ತವರನ್ನು ಹಾಗೂ ಸಹಪಾಠಿಗಳನ್ನು ಗೌರವಿಸುವುದು ಮತ್ತು ಅಂಗೀಕರಿಸುವುದು.
- ಜಾತಿ, ಮತ, ವರ್ಗ, ವರ್ಣ ಇತ್ಯಾದಿ ಚಿಂತನೆಗಳನ್ನು ಮೀರಿ ಇತರರನ್ನು ಗೌರವಿಸಲೂ ಅಂಗೀಕರಿಸಲೂ ಸಿದ್ಧರಾಗುವುದು.

**ಸಂಪರ್ಕಿಸಬೇಕಾದ ವಿಳಾಸ**

KERALA STATE COMMISSION FOR PROTECTION OF CHILD RIGHTS

**ಕೇರಳ ಪ್ರಾಂತ್ಯ ಮಕ್ಕಳ ಹಕ್ಕು ಸಂರಕ್ಷಣ ಆಯೋಗ**

'ಶ್ರೀ ಗಣೇಶ್', ಟಿ.ಸಿ. 14/2036, ವಾನ್ ರೋಸ್ ಜಂಕ್ಷನ್, ತಿರುವನಂತಪುರ-34

ಫೋನ್ : 0471-2326603

E-mail : childrightscpcr@kerala.gov.in, rtecpcr@kerala.gov.in

Website : www.kescpcr.kerala.gov.in.

**ಮಕ್ಕಳ ಸಹಾಯವಾಣಿ : 1098, ಅಪರಾಧ ನಿಯಂತ್ರಣ : 1090, ನಿರ್ಭಯ : 1800 425 1400**

ಕೇರಳ ಪೋಲೀಸ್ ಸಹಾಯವಾಣಿ : 0471-3243000/44000/45000

Online R.T.E Monitoring : www.nireekshana.org.in